ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

26 ಫೆಬ್ರವರಿ 2026 ಗುರುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 342 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಇಸ್ರೇಲ್‌ಗೆ ಬಂದಿಳಿದ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ಅವರ ಪತ್ನಿ ಸಾರಾ ಆತ್ಮೀಯವಾಗಿ ಬರಮಾಡಿಕೊಂಡರು.

ಆನೆ ಮತ್ತು ಮಾನವನ ಸಂಘರ್ಷಕ್ಕೆ ಕೊನೆ ಎಂದು ...? » 2

6.ಕೋ.ರೂ.ವೆಚ್ಚದಲ್ಲಿ ಅರಕಲಗೂಡು ಮುಖ್ಯ ರಸ್ತೆ ಅಭಿವೃದ್ಧಿ » 3

ಪಕ್ಷದ ವಿಚಾರದಲ್ಲಿ ಎ.ಬಿ.ಪಾಟೀಲ, ನಾನು ಒಂದೇ » 4

ಇಂದು ಹೆಚ್.ಡಿ.ಕೆ. ಜಿಲ್ಲಾ ಪ್ರವಾಸ

• ಪ್ರಜೋದಯ ವರದಿ

ಹಾಸನ: ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಗುರುವಾರ ಜಿಲ್ಲೆಯ ಅರಕಲಗೂಡು ಮತ್ತು ಸಕಲೇಶಪುರ ತಾಲ್ಲೂಕಿನಲ್ಲಿ ಪ್ರವಾಸ ಮಾಡಲಿದ್ದಾರೆ.

ಬೆಳಿಗ್ಗೆ 11.45ಕ್ಕೆ ಅರಕಲಗೂಡು ತಾಲ್ಲೂಕಿನ ಕೊಡಕಹಳ್ಳಿ ಗ್ರಾಮದ ಶ್ರೀ ಲಕ್ಷ್ಮೀದೇವಿ ಮತ್ತು ಶ್ರೀ ಮಾರಮ್ಮ ದೇವಸ್ಥಾನ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು. ನಂತರ ಮಧ್ಯಾಹ್ನ 12.15ಕ್ಕೆ ದುಮ್ಮಿ ಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಾಲಯದ ಉದ್ಘಾಟನಾ ಸಮಾರಂಭದಲ್ಲಿ ಭಾಗಿಯಾಗುವರು. ಮಧ್ಯಾಹ್ನ 1.30ಕ್ಕೆ ಅರೆಮಾದನ ಮಠದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ 2.45ಕ್ಕೆ ಸಕಲೇಶಪುರ ತಾಲ್ಲೂಕಿನ ಕೆರೋಡಿ ಗ್ರಾಮದ ಶ್ರೀ ಕೃಷ್ಣ ದೇವಸ್ಥಾನದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

ಗುರಿ-ಸಾಧನೆ ಬಿಟ್ಟು ಸಮಸ್ಯೆ ಗಂಭೀರತೆ ಅರಿತುಕೊಳ್ಳಿ

ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಸಚಿವ ಕೃಷ್ಣಬೈರೇಗೌಡ ತರಾಟೆ

• ಪ್ರಜೋದಯ ವರದಿ

ಹಾಸನ: ಸಭೆಗೆ ಬಂದು ಪುಸ್ತಕದಲ್ಲಿರುವ ಗುರಿ-ಸಾಧನೆ ಹೇಳುವುದನ್ನು ಬಿಟ್ಟು, ವಾಸ್ತವವಾಗಿ ಏನಾಗಿದೆ, ಮುಂದೆ ಏನಾಗಬೇಕೆಂಬ ಅಂಶಗಳನ್ನು ಸ್ಪಷ್ಟವಾಗಿ ಹೇಳಿದರೆ ಪೂರಕವಾಗಿ ನಮ್ಮಿಂದ ಏನು ಮಾಡಲು ಸಾಧ್ಯವೋ ಅದನ್ನು ಮಾಡುತ್ತೇವೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಅಧಿಕಾರಿಗಳನ್ನು ತರಾಟೆಗೆ ತೆದುಕೊಂಡರು.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಬುಧವಾರ ನಡೆದ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಅಧಿಕಾರಿಗಳು ಕಚೇರಿಯಲ್ಲಿ ಶಿಸ್ತಿನಿಂದ ಇರುವ ಜೊತೆಗೆ ಕ್ರಮಬದ್ಧವಾಗಿ ಕೆಲಸ ಮಾಡಬೇಕು. ಜನಸಾಮಾನ್ಯರ ಕೆಲಸ ಆಗುತ್ತದೆಯೋ ಇಲ್ಲವೋ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಅದನ್ನು ಬಿಟ್ಟು ಮಧ್ಯವರ್ತಿಗಳಿಗೆ ದಾರಿ ಮಾಡಿಕೊಡಬಾರದೆಂದು ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ 10,500 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿರುವ ತೆಂಗಿನ ಮರಗಳು ಕಪ್ಪು ತಲೆ ಹುಳು ಬಾಧೆಗೆ ಗುರಿಯಾಗಿವೆ. ಆದರೆ, ಇದುವರೆಗೂ ಕೇವಲ 2,500 ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ಪರೋಪಕಾರಿ ಕೀಟಗಳನ್ನು ಬಿಡಲಾಗಿದೆ. ಉಳಿದ ಕಡೆಗಳಲ್ಲಿ ಏಕೆ ಕ್ರಮ ಕೈಗೊಂಡಿಲ್ಲವೆಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಯೋಗೇಶ್ ಅವರನ್ನು ಸಚಿವರು ಪ್ರಶ್ನಿಸಿದರು.

ಪ್ರತಿಕ್ರಿಯಿಸಿದ ಯೋಗೇಶ್ ಅವರು, ಅನುದಾನದ ಕೊರತೆಯಿಂದ ವಿಳಂಬವಾಗಿದ್ದು, ಪ್ರಸ್ತಾವನೆ ಸಲ್ಲಿಸಲಾಗಿದೆ. ಅನುದಾನ ಬಂದ ತಕ್ಷಣ ಕ್ರಮ ಕೈಗೊಳ್ಳಲಾಗುವುದೆಂದು ಉತ್ತರಿಸಿದರು. ಈ ವೇಳೆ ಆಕ್ಷೇಪಣೆ ವ್ಯಕ್ತಪಡಿಸಿದ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು, ನಾವು ಕೇಳಿದರೆ ಬಜೆಟ್ ಇಲ್ಲ ಎನ್ನುತ್ತಾರೆ, ಈಗ ಸಭೆಯಲ್ಲಿ ಎಲ್ಲವೂ ಸರಿ ಇದೆ ಎಂಬ ರೀತಿಯಲ್ಲಿ ಮಾತನಾಡಬೇಡಿ, ಸುಳ್ಳು ಹೇಳಬೇಡಿ ಎಂದರು.

ಈ ವೇಳೆ ಮಧ್ಯಪ್ರವೇಶಿಸಿದ ಸಚಿವರು, ಅಧಿಕಾರಿಗಳು ಏನು ಮಾಡಬೇಕೆಂಬುದನ್ನು ಸ್ಪಷ್ಟವಾಗಿ ನಮಗೆ ತಿಳಿಸಬೇಕು. ವಿಶಾಲ ದೃಷ್ಟಿಕೋನದಲ್ಲಿ ಸಮಸ್ಯೆಯನ್ನು ನೋಡುವುದನ್ನು ಬೆಳೆಸಿಕೊಳ್ಳಬೇಕು. ಅನುದಾನ ಬರುವುದು ಯಾವಾಗ, ಪ್ರಯೋಗಾಲಯ ನಿರ್ಮಾಣ ಮಾಡಿ, ಯಾವಾಗ ಪರೋಪಕಾರಿ ಕೀಟಗಳನ್ನು ಉತ್ಪಾದನೆ ಮಾಡುತ್ತೀರಾ, ಅಷ್ಟರೊಳಗೆ ತೆಂಗಿನ ಗಿಡಗಳೆಲ್ಲಾ ಒಣಗಿ ಹೋಗುತ್ತವೆ. ಸಮಸ್ಯೆಯ ಗಂಭೀರತೆಯನ್ನು ಅರಿತುಕೊಳ್ಳದಿದ್ದರೆ ಹೇಗೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇಂದೇ ಸಂಬಂಧಪಟ್ಟವರೊಂದಿಗೆ ಮಾತನಾಡುತ್ತೇನೆ. ಬೆಲೆ ಹೆಚ್ಚಾದರೂ ಚಿಂತೆ ಇಲ್ಲ, ಕೂಡಲೇ ಲಭ್ಯವಿರುವ ಖಾಸಗಿ ಪ್ರಯೋಗಾಲಯಗಳಿಂದ ಪರೋಪಕಾರಿ ಕೀಟಗಳನ್ನು ತರಿಸಿಕೊಂಡು ಕೀಟಬಾಧೆ ನಿಯಂತ್ರಣಕ್ಕೆ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದರು.

ತಲಾ ಆದಾಯವೂ ಹೆಚ್ಚು-ಬಡವರೂ ಹೆಚ್ಚು

ಬಿಪಿಎಲ್ ಕಾರ್ಡ್ ಆದಾಯ ಮಿತಿಯನ್ನು ಕೇವಲ 1.20 ಲ.ರೂ.ಗೆ ಸೀಮಿತಗೊಳಿಸಿರುವ ಬಗ್ಗೆ ಶಾಸಕ ಕೆ.ಎಂ. ಶಿವಲಿಂಗೇಗೌಡ ಸಚಿವರ ಗಮನ ಸೆಳೆದರು. ಪ್ರತಿಕ್ರಿಯಿಸಿದ ಸಚಿವರು, ಇಡೀ ದೇಶದಲ್ಲಿ ಕರ್ನಾಟಕದ ತಲಾ ಆದಾಯ ಹೆಚ್ಚಿದೆ. ವಿಪರ್ಯಾಸ ಏನೆಂದರೆ ನಮ್ಮ ರಾಜ್ಯದಲ್ಲೇ ಅತೀ ಹೆಚ್ಚು ಬಿಪಿಎಲ್ ಕಾರ್ಡ್ ಹೊಂದಿದ್ದಾರೆ. ಹೀಗಾಗಿ ಪರಿಶೀಲನೆ ನಡೆಯುತ್ತಿದೆ ಎಂದು ಹೇಳಿದರು.

ಗೇಟ್ ನಿರ್ಮಿಸುವ ಯೋಗ್ಯತೆ ಇಲ್ಲವೇ

ಹೊಳೆನರಸೀಪುರ ತಾಲ್ಲೂಕಿನ ಮೂಡಲ ಹಿಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಿರ್ಮಿಸಿರುವ ಪಶು ಆಸ್ಪತ್ರೆಯ ಹೊಸ ಕಟ್ಟಡದ ಅವ್ಯವಸ್ಥೆ ವಿಚಾರವಾಗಿ ಪಶುಸಂಗೋಪನೆ ಇಲಾಖೆ ಉಪನಿರ್ದೇಶಕ ರಮೇಶ್ ಅವರ ಕಾರ್ಯವೈಖರಿಗೆ ಕೃಷ್ಣ ಬೈರೇಗೌಡ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಹೊಸ ಕಟ್ಟಡ ಕಟ್ಟಿದ್ದೀರಿ, ಒಂದು ಗೇಟ್ ನಿರ್ಮಿಸುವ ಯೋಗ್ಯತೆಯೂ ಇಲ್ಲವೇ, ದನಗಳ ಆಸ್ಪತ್ರೆ, ಎಂದರೆ ದನದ ದೊಡ್ಡಿ ಅಲ್ಲ. ಕೆಲಸ ಮಾಡುವ ಜಾಗ ಸ್ವಚ್ಛ-ಸುರಕ್ಷಿತವಾಗಿರಬೇಕೆಂಬ ಸ್ವಾಭಿಮಾನವೂ ಇಲ್ಲವೇ. ಕಟ್ಟಡ ನಿರ್ಮಾಣಕ್ಕೆ ಆಸಕ್ತಿ ತೋರಿದ ಇಲಾಖೆ, ಕಾಂಪೌಂಡ್ ಗೇಟ್ ನಿರ್ಮಾಣವನ್ನು ಕ್ರಿಯಾ ಯೋಜನೆಯಲ್ಲಿ ನಮೂದಿಸದೇ ಬಿಟ್ಟಿರುವುದೇಕೆಂದು ಪ್ರಶ್ನಿಸಿದರು.

ನಾನು ಆಸ್ಪತ್ರೆಗೆ ಭೇಟಿ ನೀಡಿದಾಗ ಅಲ್ಲಿ ಹೇಳುವವರಿಲ್ಲ, ಕೇಳುವವರಿಲ್ಲ. ಇದು ಯಾವ ರೀತಿಯ ಆಡಳಿತ, ಈ ಕಟ್ಟಡವನ್ನು ಯಾವ ಇಲಾಖೆ ನಿರ್ಮಿಸಿದೆ ಎಂಬುದೇ ಗೊತ್ತಿಲ್ಲ. ಕೆಆರ್‌ಐಡಿಎಲ್ ನಾವು ಕಟ್ಟಿಲ್ಲ ಎನ್ನುತ್ತಿದ್ದರೆ, ಪಿಡಬ್ಲ್ಯೂಡಿ ಇಲಾಖೆಯವರು ನಮಗೆ ಗೊತ್ತಿಲ್ಲ ಎನ್ನುತ್ತಿದ್ದಾರೆ. ಹಾಗಾದರೆ ಕಟ್ಟಡ ಕಟ್ಟಿದವರು ಯಾರೆಂದು ಪ್ರಶ್ನಿಸಿದ ಅವರು, ಆಡಳಿತ ವ್ಯವಸ್ಥೆ ಜಡತ್ವದಲ್ಲಿದೆಯೇ ಅಥವಾ ಸಕ್ರಿಯವಾಗಿದೆಯೇ ಎಂದು ವ್ಯಂಗ್ಯವಾಡಿದರು.

» ನಾಲ್ಕನೇ ಪುಟದಲ್ಲಿ

ವಾಯುಭಾರ ಕುಸಿತ: ಜಿಲ್ಲೆಯ ವಿವಿಧೆಡೆ ಮಳೆ ಸಿಂಚನ



• ಪ್ರಜೋದಯ ವರದಿ

ಹಾಸನ: ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದ ಪರಿಣಾಮ ಬುಧವಾರ ಜಿಲ್ಲೆಯ ಕೆಲ ಭಾಗಗಳಲ್ಲಿ ಚದುರಿದಂತೆ ಹಾಗು ಸಾಧಾರಣ ಮಳೆಯಾಗಿರುವುದು ರೈತರು, ಕಾಫಿ ಬೆಳೆಗಾರರಿಗೆ ಅನುಕೂಲವಾಗಿದೆ.

ಜಿಲ್ಲೆಯ ಸಕಲೇಶಪುರ, ಅರಕಲಗೂಡು, ಚನ್ನರಾಯಪಟ್ಟಣ ಸೇರಿ ಹಲವೆಡೆ ಕೆಳೆದ ಎರಡು ದಿನಗಳಿಂದ ಮಳೆಯಾಗುತ್ತಿರುವುದು ರೈತರಲ್ಲಿ ಉತ್ಸಾಹ ಮೂಡಿಸಿದೆ. ಮಂಗಳವಾರ ಅರಕಲಗೂಡು ತಾಲ್ಲೂಕಿನ ಕೊಣನೂರು, ಮಲ್ಲಿಪಟ್ಟಣ, ರಾಮನಾಥಪುರ ಭಾಗಗಳಲ್ಲಿ ಉತ್ತಮ ಮಳೆಯಾಗಿತ್ತು. ಬುಧವಾರ ಮಧ್ಯಾಹ್ನ

» ನಾಲ್ಕನೇ ಪುಟದಲ್ಲಿ

ಬಾಣಂತಿ ಸಾವು: ಸಮಗ್ರ ತನಿಖೆಗೆ ಸಂಸದರ ಸೂಚನೆ

• ಪ್ರಜೋದಯ ವರದಿ

ಹಾಸನ: ವೈದ್ಯರ ನಿರ್ಲಕ್ಷ್ಯದಿಂದ ನಗರದ ಚಾಮರಾಜೇಂದ್ರ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಬಾಣಂತಿ ಸಾವನ್ನಪ್ಪಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಸಮಗ್ರ ತನಿಖೆ ನಡೆಸಿ ಶೀಘ್ರ ವರದಿ ಸಲ್ಲಿಸುವಂತೆ ಸಂಸದ ಶ್ರೇಯಸ್ ಪಟೇಲ್ ಅವರು ವೈದ್ಯಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಬುಧವಾರ ಆಸ್ಪತ್ರೆಗೆ ಭೇಟಿ ನೀಡಿದ ಅವರು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಶಿಶುವಿನ ಆರೋಗ್ಯ ವಿಚಾರಿಸಿದರು. ಬಳಿಕ ವೈದ್ಯಾಧಿಕಾರಿಗಳು ಹಾಗು ಸಿಬ್ಬಂದಿಯೊಂದಿಗೆ ಸಭೆ ನಡೆಸಿ, ಘಟನೆಗೆ ಸಂಬಂಧಿಸಿದ ಸಂಪೂರ್ಣ ವಿವರಗಳನ್ನು ಪಡೆದುಕೊಂಡರು.

ಪ್ರಕರಣದ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು, ಆಸ್ಪತ್ರೆಯಲ್ಲಿ ಪದೇ ಪದೇ ಇಂತಹ ದುರ್ಘಟನೆಗಳು ಸಂಭವಿಸುತ್ತಿರುವುದು ಆತಂಕಕಾರಿ ಬೆಳವಣಿಗೆ. ವೈದ್ಯರ ನಿರ್ಲಕ್ಷ್ಯ ನಡೆದಿದೆ ಎಂಬ ಆರೋಪಗಳು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿರುವ ಹಿನ್ನಲೆ, ತನಿಖೆ ಪಾರದರ್ಶಕವಾಗಿ ನಡೆಯಬೇಕು. ತಪ್ಪಿತಸ್ಥರು ಯಾರೇ ಆಗಿದ್ದರೂ, ಯಾವುದೇ ಹಂತದಲ್ಲಿಯೂ ಸಹಿಸುವ ಪ್ರಶ್ನೆಯೇ ಇಲ್ಲ. ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸೂಚನೆ ನೀಡಿದರು.

ಆಸ್ಪತ್ರೆಯ ಗ್ರೂಪ್-ಡಿ ನೌಕರರು ಹಾಗೂ ಕೆಲವು ಸಿಬ್ಬಂದಿಯ ವರ್ತನೆ ಕುರಿತು ಆಕ್ರೋಶ ವ್ಯಕ್ತಪಡಿಸಿದ ಸಂಸದರು, ಸಾರ್ವಜನಿಕ ಸೇವಾ ಸಂಸ್ಥೆಯಾದ ಆಸ್ಪತ್ರೆಯಲ್ಲಿ ಮಾನವೀಯತೆ ಹಾಗು ಸೌಜನ್ಯತೆಯಿಂದ ವರ್ತಿಸುವುದು ಅನಿವಾರ್ಯ. ಆಸ್ಪತ್ರೆಗೆ ಬರುವ ರೋಗಿಗಳು ಹಾಗು ಅವರ ಕುಟುಂಬಸ್ಥರೊಂದಿಗೆ ಗೌರವಯುತವಾಗಿ ನಡೆದುಕೊಳ್ಳಬೇಕು. ದರ್ಪದಿಂದ ವರ್ತಿಸುವ ಸಿಬ್ಬಂದಿಯನ್ನು ಕೂಡಲೇ ಅಮಾನತು ಮಾಡುವಂತೆ ವೈದ್ಯಾಧಿಕಾರಿಗಳಿಗೆ ಸೂಚಿಸಿದರು.

ಮುಂದಿನ ದಿನಗಳಲ್ಲಿ ಇಂತಹ ದುರ್ಘಟನೆಗಳು ಮರುಕಳಿಸದಂತೆ ಕಟ್ಟುನಿಟ್ಟಿನ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಆಸ್ಪತ್ರೆಯ ಸೇವಾ ಗುಣಮಟ್ಟವನ್ನು ಸುಧಾರಿಸಲು ಅಗತ್ಯ ಕ್ರಮಗಳನ್ನು ಜಾರಿಗೆ ತರಬೇಕೆಂದು ನಿರ್ದೇಶನ ನೀಡಿದರು. ಆಸ್ಪತ್ರೆಯ ವೈದ್ಯರು, ಅಧಿಕಾರಿಗಳು ಇದ್ದರು.

ಶಿವಲಿಂಗೇಗೌಡ ಆಹ್ವಾನಿಸಿದರೆ ಅರಸೀಕೆರೆಯಲ್ಲೇ ಸ್ಪರ್ಧೆ

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಸವಾಲು: 2028ರ ರಣರಂಗಕ್ಕೆ ಸಿದ್ಧ

• ಪ್ರಜೋದಯ ವರದಿ

ಅರಸೀಕೆರೆ : ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಸಾರ್ವಜನಿಕವಾಗಿ ರೇವಣ್ಣ ಅವರು ಅರಸೀಕೆರೆ ಕ್ಷೇತ್ರದಿಂದಲೇ ಸ್ಪರ್ಧೆ ಮಾಡಬೇಕೆಂದು ಸವಾಲು ಹಾಕಿದರೆ ಸ್ಪರ್ಧೆ ಮಾಡುತ್ತೇನೆಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2028ಕ್ಕೆ ರಣರಂಗ ಸಿದ್ಧವಾಗಲಿದೆ. ಆ ಸಂದರ್ಭದಲ್ಲಿ ಮಾತನಾಡುತ್ತೇನೆ. ಕಳೆದ ಚುನಾವಣೆಯಲ್ಲೂ ಹಾಸನ ಕ್ಷೇತ್ರದಲ್ಲೂ ಇದೇ ರೀತಿ ಸವಾಲು ಹಾಕಿದ್ದರು. ಅಲ್ಲಿ ಏನಾಯಿತು ಎಂದು ಪ್ರಶ್ನಿಸಿದರು.

ದೇವೇಗೌಡರ ಮಾತು ಮೀರಿ, ಈ ವ್ಯಕ್ತಿಯನ್ನು ಗೆಲ್ಲಿಸಿದ ತಪ್ಪಿಗೆ ಈಗ ಪಶ್ಚಾತ್ತಾಪ ಪಡುವಂತಾಗಿದೆ. ಜೆಡಿಎಸ್ ನಲ್ಲಿದ್ದಾಗ ಮೂರು ಬಾರಿ ಶಾಸಕರಾಗಿದ್ದು, ಗೌಡರ ಆಶೀರ್ವಾದದಿಂದ, ಚುನಾವಣಾ ಖರ್ಚನ್ನು ನಾನು

ಭರಿಸಿದ್ದನ್ನು ಮರೆತು, ಮಾತನಾಡುತ್ತಿರುವ ಈ ಮನುಷ್ಯನಿಗೆ ನೈತಿಕತೆ ಎಂಬುದೇ ಇಲ್ಲ. ನಮಗೆ ಮೋಸ ಮಾಡಿ, ಮಂತ್ರಿಗಿರಿ ಆಸೆಗಾಗಿ ಕಾಂಗ್ರೆಸ್ ಸೇರಿರುವ ಈ ಮನುಷ್ಯ ಕಾಂಗ್ರೆಸ್‌ಗೆ ಟೋಪಿ ಹಾಕುತ್ತಾನೇ ಕಾದು ನೋಡಿ ಎಂದರು.

ಪ್ರಸ್ತುತ ರಾಗಿ ಖರೀದಿ ಕೇಂದ್ರದಲ್ಲಿ ತೂಕದಲ್ಲಿ ವ್ಯತ್ಯಾಸ ಮಾಡಲಾಗುತ್ತಿದೆ ಎಂದು ರೈತರು ಅಳಲು ತೋಡಿಕೊಂಡಿದ್ದಾರೆ. ಹೀಗೆ ರೈತರು, ವ್ಯಾಪಾರಸ್ಥರ ವಿರೋಧಿಯಾಗಿ ನಡೆದುಕೊಳ್ಳುತ್ತಿರುವ ಈ ಮನುಷ್ಯನಿಗೆ ಅರಸೀಕೆರೆ ಜನತೆ ಪಾಠ ಕಲಿಸಲಿದ್ದಾರೆ. ಅರಸೀಕೆರೆ ಅಭಿವೃದ್ಧಿಗೆ ದೇವೇಗೌಡರು, ಕುಮಾರಸ್ವಾಮಿ, ನಾನು ಏನು ಮಾಡಿದ್ದೇವೆಂದು

» ನಾಲ್ಕನೇ ಪುಟದಲ್ಲಿ

ಫುಟ್‌ಪಾತ್ ವ್ಯಾಪಾರಿಗಳ ಸಮಸ್ಯೆ ಆಲಿಕೆ

ನಗರದ ತರಕಾರಿ ಮಾರುಕಟ್ಟೆಗೆ ಭೇಟಿ ನೀಡಿದ ಹೆಚ್.ಡಿ.ರೇವಣ್ಣ ಅವರು, ತರಕಾರಿ ವ್ಯಾಪಾರಸ್ಥರು, ಫುಟ್‌ಪಾತ್ ವ್ಯಾಪಾರಿಗಳ ಸಮಸ್ಯೆ ಮತ್ತು ದೂರು ಆಲಿಸಿದರು.

ಬಳಿಕ ಮಾತನಾಡಿದ ಅವರು, ಹಲವು ದಶಕಗಳಿಂದ ನಗರದ ಹೃದಯಭಾಗದಲ್ಲಿರುವ ತರಕಾರಿ ಮಾರುಕಟ್ಟೆಯನ್ನು ನಂಬಿ ನೂರಾರು ಕುಟುಂಬಗಳು ಜೀವನ ನಿರ್ವಹಣೆ ಮಾಡುತ್ತಿವೆ. ಆದರೆ, ಸ್ಥಳೀಯ ಶಾಸಕರು ಅವರನ್ನು ಒಕ್ಕಲೆಬ್ಬಿಸಲು ಮುಂದಾಗಿರುವುದು ಖಂಡನೀಯ. ಬಡಪಾಯಿಗಳ ಹೊಟ್ಟೆ ಮೇಲೆ ಹೊಡೆದಂತೆ ಆಗುತ್ತದೆ ಅಲ್ಲವೇ ಎಂದು ಬೇಸರ ಹೊರ ಹಾಕಿದರು.

ಯಾರಿಗೂ ಅಧಿಕಾರ ಶಾಶ್ವತವಲ್ಲ, ಅದು ಸಿಕ್ಕ ಅವಧಿಯಲ್ಲಿ ನಾವು ಮಾಡುವ ಜನಪರ ಕೆಲಸ ಕಾರ್ಯಗಳೇ ಶಾಶ್ವತ. ತರಕಾರಿ ಮಾರುಕಟ್ಟೆ ನಡೆಯುವ ಜಾಗದಲ್ಲಿ ಫುಡ್‌ಕೋರ್ಟ್ ಮಾಡಲು ಹೊರಟಿರುವ ಶಾಸಕರ ನಡೆಯನ್ನು ತೀವ್ರವಾಗಿ ವಿರೋಧಿಸಿದ ಅವರು, ಫುಡ್‌ಕೋರ್ಟ್‌ನ್ನು ಬೇರೆ ಎಲ್ಲಾದರೂ ಮಾಡಲಿ, ಹತ್ತಾರು ವರ್ಷದಿಂದ ತರಕಾರಿ ವ್ಯಾಪಾರ ಮಾಡಿಕೊಂಡು ಬರುತ್ತಿರುವವರನ್ನು ಬೀದಿಪಾಲು ಸರಿಯಲ್ಲ. ಅಗತ್ಯವಿದ್ದರೆ ವರ್ತಕರ ಜೊತೆಗೂಡಿ ನಾನು ಹಾಗೂ ನಮ್ಮ ಪಕ್ಷದ ಮುಖಂಡರು ಹೋರಾಟ ಮಾಡಲು ಹಿಂಜರಿಯುವುದಿಲ್ಲವೆಂದು ಎಚ್ಚರಿಸಿದರು.

ಸಿಎಂ ಬದಲಾವಣೆ ಹೇಳಿಕೆ ಕೇಳಿ ನೋವಾಗಿದೆ

ಶೀಘ್ರವೇ ಹೈಕಮಾಂಡ್ ಸ್ಪಷ್ಟ ತೀರ್ಮಾನ ಕೈಗೊಳ್ಳಬೇಕು : ಹೆಚ್.ಎಂ.ರೇವಣ್ಣ

• ಪ್ರಜೋದಯ ವರದಿ

ಹಾಸನ: ಮುಖ್ಯಮಂತ್ರಿ ಬದಲಾವಣೆ ಕುರಿತ ಹೇಳಿಕೆಗಳಿಂದ ನನಗೂ ನೋವಾಗಿದೆ. ಇದರಿಂದ ಪಕ್ಷಕ್ಕೂ ಹಾನಿಯಾಗಬಹುದು. ಶೀಘ್ರದಲ್ಲೇ ಸ್ಪಷ್ಟ ತೀರ್ಮಾನ ಕೈಗೊಳ್ಳಬೇಕೆಂದು ರಾಜ್ಯದ ಹಿರಿಯ ನಾಯಕರು ಹಾಗು ಹೈಕಮಾಂಡ್‌ಗೆ ಮನವಿ ಮಾಡಿದ್ದೇವೆಂದು ಗ್ಯಾರಂಟಿಗಳ ಅನುಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಹೆಚ್.ಎಂ. ರೇವಣ್ಣ ಅವರು ತಿಳಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಬದಲಾವಣೆಗೂ ನನಗೂ ಸಂಬಂಧವಿಲ್ಲ, ನಾನು ಕಾಂಗ್ರೆಸ್‌ನ

ನಿಷ್ಠಾವಂತ ಕಾರ್ಯಕರ್ತ. ಈ ಬಗ್ಗೆ ತೀರ್ಮಾನ ಕೈಗೊಳ್ಳುವುದು ಪಕ್ಷದ ನಾಯಕರು ಮತ್ತು ಹೈಕಮಾಂಡ್‌ಗೆ ಬಿಟ್ಟ ವಿಚಾರವೆಂದರು.

ರಾಜ್ಯದಲ್ಲಿ ಪಂಚ ಗ್ಯಾರಂಟಿ ಯೋಜನೆಗಳನ್ನು ಶೇ.98 ರಷ್ಟು ಜನರಿಗೆ ತಲುಪಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಶಕ್ತಿ, ಗೃಹ ಲಕ್ಷ್ಮೀ, ಗೃಹಜ್ಯೋತಿ, ಯುವನಿಧಿ, ಅನ್ನಭಾಗ್ಯ ಯೋಜನೆಗಳು ಜನರಿಗೆ ಸಮರ್ಪಕವಾಗಿ ತಲುಪುತ್ತಿರುವುದು ಸಂತೋಷದ ವಿಷಯ. ರಾಜ್ಯಾದ್ಯಂತ 1.24 ಕೋಟಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ನೇರವಾಗಿ ಹಣ ಜಮೆಯಾಗುತ್ತಿದೆ. ಇದುವರೆಗೆ ಒಟ್ಟು 1 ಲಕ್ಷ 18 ಸಾವಿರ ಕೋ. ರೂ. ನೇರ ಲಾಭಾಂಶ ವರ್ಗಾವಣೆ ಮೂಲಕ ಜನರಿಗೆ ಸಂದಾಯವಾಗಿದೆ. ಜಿಲ್ಲೆಯಲ್ಲಿ ಮಾತ್ರ 1.70 ಕೋ.ರೂ. ವಿತರಣೆಯಾಗಿದೆ ಎಂದು ಹೇಳಿದರು.

ಸಾವನ್ನಪ್ಪಿರುವ ಕೆಲವರ ಬ್ಯಾಂಕ್ ಖಾತೆಗಳಿಗೆ ಸಹ ಹಣ ಜಮೆಯಾಗಿರುವುದು ಗಮನಕ್ಕೆ ಬಂದಿದ್ದು, ಆ ಮೊತ್ತವನ್ನು ವಾಪಾಸ್ ಪಡೆಯುವ ಕ್ರಮ ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ ಇಂತಹ ದೋಷಗಳು ಮರುಕಳಿಸದಂತೆ ಜಾಗ್ರತೆ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಯಾವುದೇ ಜಾತಿ ಅಥವಾ ಪಕ್ಷ ಆಧಾರದ ಮೇಲೆ ಗ್ಯಾರಂಟಿಗಳ ವಿಂಗಡಣೆ ಮಾಡಿಲ್ಲ, ಹಣ ಪಡೆದಿರುವವರು ಬಹಳ ಸಂತೋಷವಾಗಿದ್ದಾರೆ. ವಿರೋಧ ಪಕ್ಷವಾದ ಬಿಜೆಪಿ ಆರಂಭದಿಂದಲೂ ಈ ಯೋಜನೆಗಳನ್ನು ವಿರೋಧಿಸುತ್ತಿದ್ದು, ರಾಜಕೀಯ ಕಾರಣಗಳಿಂದ ಟೀಕೆ ಮಾಡುತ್ತಿದೆ ಎಂದು ಆರೋಪಿಸಿದರು.

» ನಾಲ್ಕನೇ ಪುಟದಲ್ಲಿ

ಮಂತ್ರಿ ಸ್ಥಾನಕ್ಕೆ ಬೇಡಿಕೆ ತಪ್ಪೇನಿಲ್ಲ: ಡಿ.ಕೆ.ಶಿ.

• ಪ್ರಜೋದಯ ವರದಿ

ಬೆಂಗಳೂರು : ಕಾಂಗ್ರೆಸ್‌ನಲ್ಲಿ ಮೊದಲ ಬಾರಿಗೆ ಗೆದ್ದ ಶಾಸಕರು ಮಂತ್ರಿ ಸ್ಥಾನದ ಬೇಡಿಕೆ ಇಟ್ಟಿರುವುದರಲ್ಲಿ ತಪ್ಪೇನೂ ಇಲ್ಲ, ಎಲ್ಲರಿಗೂ ಮಂತ್ರಿ ಆಗಬೇಕೆಂಬ ಆಸೆ ಇರುತ್ತದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೊದಲ ಬಾರಿ ಗೆದ್ದ ಶಾಸಕರು ಮಂತ್ರಿಗಿರಿಗೆ ಬೇಡಿಕೆ ಇಟ್ಟು ಬರೆದಿರುವ ಪತ್ರ ನನಗೆ ತಲುಪಿಲ್ಲ, ನಾನು ಪತ್ರಿಕೆಗಳಲ್ಲಿ ನೋಡಿದ್ದೇನೆ ಅಷ್ಟೇ. ಹೊಸ ಪೀಳಿಗೆ ಬೆಳೆಯಬೇಕು. ನಾವೇ ಎಷ್ಟು ದಿನ ಗೂಟ ಹೊಡೆದುಕೊಂಡು ಕೂರಲು ಆಗುತ್ತದಾ ಎಂದು ಹೇಳಿದರು.

92 ಸಾವಿರ ಅನಕ್ಷರಸ್ಥರನ್ನು ಎಲ್ಲಿಂದ ಸೃಷ್ಟಿ ಮಾಡ್ತೀರಾ...?

ಸಚಿವರ ಪ್ರಶ್ನೆಗೆ ವಯಸ್ಕ ಶಿಕ್ಷಣ ಇಲಾಖೆ ಅಧಿಕಾರಿ ತಿಬ್ಬಿಬ್ಬು

• ಪ್ರಜೋದಯ ವರದಿ

ಹಾಸನ: ಜಿಲ್ಲೆಯ ಜನಸಂಖ್ಯೆ 17 ಲಕ್ಷವಾಗಿದ್ದು, ಈ ಪೈಕಿ ಶೇ.77 ರಷ್ಟು ಜನರು ಸುಶಿಕ್ಷಿತರಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ವಯಸ್ಕರ ಶಿಕ್ಷಣ ಇಲಾಖೆ ಕಳೆದ 33 ವರ್ಷಗಳಿಂದ ಪ್ರತಿ ವರ್ಷ 92,000 ಜನರಿಗೆ ಶಿಕ್ಷಣ ನೀಡುತ್ತಿರುವುದಾಗಿ ವರದಿ ಸಲ್ಲಿಸಿರುವುದು ಹೇಗೆ ಸಾಧ್ಯವೆಂಬ ಉಸ್ತುವಾರಿ ಸಚಿವರ ಕೃಷ್ಣಬೈರೇಗೌಡ ಅವರ ಪ್ರಶ್ನೆಗೆ ಉತ್ತರಿಸಲಾಗದೆ ಜಿಲ್ಲಾ ವಯಸ್ಕ ಶಿಕ್ಷಣ ಇಲಾಖೆ ಅಧಿಕಾರಿ ತಬ್ಬಿಬ್ಬಾದರು.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಈ ವಿಚಾರ ಪ್ರಸ್ತಾಪವಾಗುತ್ತಿದ್ದಂತೆ ಸಚಿವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಜಿಲ್ಲೆಯಲ್ಲಿ ಪ್ರತಿ ವರ್ಷ 92 ಸಾವಿರ ಅನಕ್ಷರಸ್ಥರನ್ನು ಎಲ್ಲಿಂದ ಸೃಷ್ಟಿ ಮಾಡ್ತಾ ಇದೀರಾ, ಜನಸಂಖ್ಯೆ, ಸಾಕ್ಷರತಾ ಪ್ರಮಾಣ ಎಲ್ಲವೂ ಲಭ್ಯವಿರುವಾಗ

ಇಂತಹ ಅಂಕಿ-ಅಂಶಗಳನ್ನು ಹೇಗೆ ನೀಡುತ್ತೀರಿ ಎಂದು ಪ್ರಶ್ನಿಸಿದರು.

ಅಧಿಕಾರಿಗಳು ಸಮರ್ಪಕ ಉತ್ತರ ನೀಡಲು ತಬ್ಬಿಬ್ಬಾದರು. ಹಳೆಯ ಪದ್ಧತಿಗಳ ಪ್ರಕಾರ ಸಂಖ್ಯೆಯನ್ನು ವರದಿ ಮಾಡಲಾಗುತ್ತಿದೆ ಎಂದು ಸ್ಪಷ್ಟನೆ ನೀಡಲು ಯತ್ನಿಸಿದರೂ, ಸಚಿವರು ಅಂಕಿ-ಅಂಶಗಳ ನಿಖರತೆ ಹಾಗೂ ಪಾರದರ್ಶಕತೆಯ ಬಗ್ಗೆ ಕಠಿಣ ಎಚ್ಚರಿಕೆ ನೀಡಿದರು. ವಾಸ್ತವಿಕ ಪರಿಸ್ಥಿತಿಗೆ ತಕ್ಕಂತೆ ಮಾಹಿತಿ ನೀಡಬೇಕು. ಕೇವಲ ಕಾಗದದ ಮೇಲೆ ಕಾರ್ಯಕ್ರಮ ನಡೆಸಿದಂತೆ ವರದಿ ಸಲ್ಲಿಸುವುದು ಸರಿಯಲ್ಲ. ಮುಂದಿನ ಸಭೆಗೆ ಸಮಗ್ರ ಮತ್ತು ನಿಖರ ಮಾಹಿತಿ ತರುವಂತೆ ಸಚಿವರು ಸೂಚಿಸಿದರು.

ಹೊಂದಾಣಿಕೆ ಮಾಡಿಕೊಳ್ಳುವ ಆಕಾಂಕ್ಷೆ ನಮಗಿದೆ: ಹೆಚ್.ಡಿ.ದೇವೇಗೌಡ

ಸ್ಥಳೀಯ ಸಂಸ್ಥೆ ಮೈತ್ರಿ ಬಿಜೆಪಿ ತೀರ್ಮಾನಿಸಲಿ

• ಪ್ರಜೋದಯ ವರದಿ

ಬೆಂಗಳೂರು: ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ, ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿ ಮಾಡಿಕೊಳ್ಳುವ ಆಕಾಂಕ್ಷೆ ನಮಗಿದೆ. ಬಿಜೆಪಿ ಯಾವ ನಿಲುವು ತೆಗೆದುಕೊಳ್ಳುತ್ತದೋ ಅದರ ಮೇಲೆ ನಾವು ತೀರ್ಮಾನ ಮಾಡುತ್ತೇವೆಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ತಿಳಿಸಿದರು.

ಬುಧವಾರ ಜೆ.ಪಿ.ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಎನ್‌ಡಿಎ ಮೈತ್ರಿಕೂಟದ ಭಾಗವಾಗಿದ್ದೇವೆ. ಜಿಬಿಎ, ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಒಟ್ಟಾಗಿ ಹೋಗಬೇಕೆಂಬುವುದು ನಮ್ಮ ಆಕಾಂಕ್ಷೆ. ಅದರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಅಂತಿಮವಾಗಿ ಒಂದು ನಿರ್ಣಯ ವಾಗಬೇಕೆಂದು ಹೇಳಿದರು.

ಬಿಜೆಪಿ ರಾಷ್ಟ್ರೀಯ ಪಕ್ಷ, ನಮ್ಮದು ಪ್ರಾದೇಶಿಕ ಪಕ್ಷ. ಹೀಗಾಗಿ ಚುನಾವಣಾ ಪೂರ್ವ ಹೊಂದಾಣಿಕೆ ಕುರಿತಂತೆ ಅವರು ಏನು ನಿರ್ಧಾರ ಮಾಡುತ್ತಾರೋ, ಅವರ ಭಾವನೆ ಹೇಳಿದ ಬಳಿಕ ನಾವು ಹೆಜ್ಜೆ ಇಡುತ್ತೇವೆ. ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಯಲ್ಲಿ ನಾವು ಒಟ್ಟಾಗಿ ಹೋಗುತ್ತೇವೆ. ಆದರೆ, ಜಿಬಿಎ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಡಿಮೆ ಸ್ಥಾನಗಳು ಇರುತ್ತದೆ. ಸೀಟು ಹಂಚಿಕೆ ಮಾಡುವುದು ಕಷ್ಟವಾಗಬಹುದು. ಆದರೆ, ನಾವು ಮೈತ್ರಿಯಾಗಿ ಹೋಗಬೇಕೆಂಬ ಪ್ರಯತ್ನ ಮಾಡುತ್ತೇವೆ. ಹೆಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ಚರ್ಚಿ

ಸಿ ಅಂತಿಮ ರೂಪುರೇಷೆ ಸಿದ್ಧಪಡಿಸಲಾಗುತ್ತದೆ ಎಂದು ತಿಳಿಸಿದರು.

ಸಮಯ ಬಂದಾಗ ಪ್ರತಿಕ್ರಿಯಿಸುವೆ

ಜೆಡಿಎಸ್‌ನಲ್ಲಿ ಕುಟುಂಬದವರನ್ನು ಹೊರತು ಪಡಿಸಿ ಬೇರೆಯವರಿಗೆ ಹುದ್ದೆ ಕೊಡುವುದಿಲ್ಲವೆಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ನನಗೆ ಪ್ರತಿಯೊಂದು ನೆನಪಿನ ಶಕ್ತಿ ಇದೆ. ಪ್ರತಿಯೊಂದಕ್ಕೂ ಸಮಯ ಬಂದಾಗ ಪ್ರತಿಕ್ರಿಯಿಸುತ್ತೇನೆ.

> **ಬಿಜೆಪಿಯ ಕೇಂದ್ರ ನಾಯಕರೊಂದಿಗೆ ಚರ್ಚಿಸಲು ಹೆಚ್.ಡಿ.ಕುಮಾರಸ್ವಾಮಿ ಅವರು ದೆಹಲಿಗೆ ತೆರಳಿದ್ದಾರೆ. ಅವರು ವಾಪಾಸ್ ಬಂದ ನಂತರ ನಿಖಿಲ್ ಕುಮಾರಸ್ವಾಮಿ, ತಿಪ್ಪೇಸ್ವಾಮಿ, ಬಾಬು ಹಾಗು ಇತರೆ ನಾಯಕರೊಂದಿಗೆ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು.**
> **-ಹೆಚ್.ಡಿ.ದೇವೇಗೌಡರು, ಮಾಜಿ ಪ್ರಧಾನಿ**

ವಿಜಯಪುರದಲ್ಲಿ ಫೆ.27 ರಂದು ಜೆಡಿಎಸ್ ಸಮಾವೇಶ ನಡೆಸಲಾಗುತ್ತದೆ. ಈಗಾಗಲೇ ಅದರ ಪೂರ್ವ ಸಿದ್ಧತೆಗಳು ಪ್ರಾರಂಭವಾಗಿವೆ. ಆ ಸಮಾವೇಶದಲ್ಲಿ ಪಾಲ್ಗೊಳ್ಳಲು ನನಗೂ ಆಹ್ವಾನ ನೀಡಿದ್ದಾರೆ ಎಂದು ಹೇಳಿದರು.

ಬೆಂಗಳೂರನ್ನು ಐದು ಭಾಗವಾಗಿ ವಿಂಗಡಿಸಲಾಗಿದೆ. ಇದರ ಬಗ್ಗೆ ಹೆಚ್.ಡಿ.ಕುಮಾರಸ್ವಾಮಿ ಹಾಗು ನಿಖಿಲ್ ಕುಮಾರಸ್ವಾಮಿ ಸೇರಿ ಎಲ್ಲರೂ ಸೇರಿ ಚರ್ಚೆ ಮಾಡಿ ಸೂಕ್ತ ತೀರ್ಮಾನ ಮಾಡುತ್ತೇವೆ. ರಾಜ್ಯಸಭೆಯಲ್ಲಿ ರಾಜ್ಯದ ನೀರಾವರಿ ವಿಚಾರ ಸೇರಿ ಏನು ಪ್ರಸ್ತಾಪ ಮಾಡಬೇಕೊ ಅದನ್ನು ಮಾಡುತ್ತೇನೆ. ನನ್ನ ರಾಜ್ಯಸಭಾ ಅವಧಿ ಮುಗಿದರೂ ಮಾಧ್ಯಮದವರನ್ನು ಭೇಟಿಯಾಗುವೆ ಎಂದರು.

ಜೆಡಿಎಸ್ ಕೋರ್‌ಕಮಿಟಿ ಅಧ್ಯಕ್ಷ ಕೃಷ್ಣಾರೆಡ್ಡಿ, ವಿಧಾನಪರಿಷತ್ ಸದಸ್ಯ ಟಿ.ಎ.ಶರವಣ, ವಿಧಾನಪರಿಷತ್ ಮಾಜಿ ಸದಸ್ಯರಾದ ಹೆಚ್.ಎಂ. ರಮೇಶ್‌ಗೌಡ, ಕೆ.ಎ.ತಿಪ್ಪೇಸ್ವಾಮಿ ಮೊದಲಾದ ಪಕ್ಷದ ಮುಖಂಡರು ಉಪಸ್ಥಿತರಿದ್ದರು.

» ನಾಲ್ಕನೇ ಪುಟದಲ್ಲಿ

ಕೆಡಿಪಿ ಸಭೆಯಲ್ಲಿ ಬಾಣಂತಿ ಸಾವು ಪ್ರಕರಣ ಚರ್ಚೆ

• ಪ್ರಜೋದಯ ವರದಿ

ಹಾಸನ: ಜಿಲ್ಲಾ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಹೆರಿಗೆ ಬಳಿಕ ಬಾಣಂತಿ ಸಾವನ್ನಪ್ಪಿದ ಪ್ರಕರಣ ಕೆಡಿಪಿ ಸಭೆಯಲ್ಲೂ ತೀವ್ರ ಚರ್ಚೆಗೆ ಗ್ರಾಸವಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಘಟನೆ ಕುರಿತು ಅಧಿಕಾರಿಗಳಿಂದ ವಿವರವಾದ ಮಾಹಿತಿ ಪಡೆದು ಕೊಂಡರು.

ಕೆಡಿಪಿ ಸಭೆಯಲ್ಲಿ ಹಿಮ್ಸ್ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ||ರಾಘವೇಂದ್ರ ಪ್ರಸಾದ್ ಪ್ರಕರಣದ ವಿವರಗಳನ್ನು ನೀಡಿದರು. ಶನಿವಾರ ಶ್ರುತಿ ಎಂಬುವವರು ಆಸ್ಪತ್ರೆಗೆ ದಾಖಲಾಗಿದ್ದು, ಕರ್ತವ್ಯ ನಿರತ ವೈದ್ಯರು ಚಿಕಿತ್ಸೆ ನೀಡಿದ್ದರು. ಭಾನುವಾರ ಮಧ್ಯಾಹ್ನ ಆಕೆಗೆ ಸಾಮಾನ್ಯ ಹೆರಿಗೆ ನಡೆದಿತ್ತು. ಹೆರಿಗೆ ಬಳಿಕ ಮಹಿಳೆ ಆರೋಗ್ಯವಾಗಿಯೇ ಇದ್ದು, ಸುಮಾರು ಹತ್ತು ನಿಮಿಷಗಳ ಬಳಿಕ ಆಕೆಯ ಆರೋಗ್ಯದಲ್ಲಿ ಏರುಪೇರಾಗಿರುವುದು ಗಮನಿಸಿದ ವೈದ್ಯರು ತುರ್ತು ಚಿಕಿತ್ಸೆ ನೀಡಲು ಮುಂದಾದರೆಂದು ಹೇಳಿದರು.

ಇದು ಮಹಿಳೆಯ ನಾಲ್ಕನೇ ಗರ್ಭಧಾರಣೆಯಾಗಿದ್ದು, ಈ ಹಿಂದೆ ಹಿಮ್ಸ್‌ಗೆ ನಿಯಮಿತ ತಪಾಸಣೆಗೆ ಬಂದಿರಲಿಲ್ಲವೆಂಬ ಮಾಹಿತಿ ಸಭೆಯಲ್ಲಿ ಹೊರ ಬಂದಿತು. ಮಹಿಳೆಯ ಆರೋಗ್ಯ ಸ್ಥಿತಿ ಹದಗೆಟ್ಟಾಗ ಕುಟುಂಬಸ್ಥರು ಬೇರೆ ಆಸ್ಪತ್ರೆಗೆ ಕರೆದೊಯ್ಯುವುದಾಗಿ ತಿಳಿಸಿದ್ದು, ಬಳಿಕ ಭಾನುವಾರ ಸಂಜೆ ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾಳೆಂಬ ಮಾಹಿತಿ ಲಭ್ಯವಾಗಿದೆ. ಈ ಹಿಂದೆ ಪರೀಕ್ಷೆ ಮಾಡಿಸಿಕೊಂಡ ವರದಿಗಳಲ್ಲಿ ಯಾವುದೇ ಗಂಭೀರ ಸಮಸ್ಯೆ ಇತ್ತೇ ಎಂಬ ಪ್ರಶ್ನೆಯನ್ನು ಸಚಿವ ಕೃಷ್ಣಬೈರೇಗೌಡ ವೈದ್ಯರಿಗೆ ಕೇಳಿದರು. ಪ್ರತಿಕ್ರಿಯಿಸಿದ ಪ್ರಸೂತಿ ತಜ್ಞೆ ಡಾ||ಗಿರಿಜಾ ಅವರು ಈ ಹಿಂದೆ ಯಾವುದೇ ಆರೋಗ್ಯ ಸಮಸ್ಯೆ ದಾಖಲಾಗಿಲ್ಲವೆಂದು ಸ್ಪಷ್ಟಪಡಿಸಿದರು.

ಮಹಿಳೆಗೆ ನೀಡಲಾದ ಚಿಕಿತ್ಸೆಯ ಕುರಿತು ಸಭೆಯಲ್ಲಿ ವಿವರಿಸಿದ ಡಾ||ಗಿರಿಜಾ ಅವರು, ಮಹಿಳೆಯ ಸ್ಥಿತಿ ಹದಗೆಟ್ಟಾಗ ನಾನು ಕೂಡ ಆಸ್ಪತ್ರೆಗೆ ಬಂದು ಪರಿಶೀಲನೆ ನಡೆಸಿದ್ದೇನೆ. ಇದು ತಕ್ಷಣ ಆರೋಗ್ಯದಲ್ಲಿ ಉಂಟಾಗುವ ಏರುಪೇರು. ಸಾವಿಗೆ ನಿಖರ ಕಾರಣ ತಿಳಿಯಲು ಮರಣೋತ್ತರ ವೈದ್ಯಕೀಯ ಪರೀಕ್ಷೆ ನಡೆಸದ ಕಾರಣ ಸಾಧ್ಯವಾಗಿಲ್ಲವೆಂದು ತಿಳಿಸಿದರು.

ಆನೆ ಮತ್ತು ಮಾನವನ ಸಂಘರ್ಷಕ್ಕೆ ಕೊನೆ ಎಂದು?



» ಮಾನವನ ನಿರಂತರ ಹಸ್ತಕ್ಷೇಪ ಹಾಗೂ ಸರಕಾರಗಳ ನಿರ್ಲಕ್ಷ್ಯದಿಂದಾಗಿ ಜನರು ಮಾತ್ರವೇ ತೊಂದರೆಯನ್ನು ಎದುರಿಸುತ್ತಿಲ್ಲ, ಜತೆಗೆ ಕಾಡಾನೆ, ಹುಲಿ, ಚಿರತೆಯಂಥ ಅಪರೂಪದ ವನ್ಯ ಜೀವಿಗಳೂ ಕಣ್ಮರೆಯಾಗುತ್ತಿವೆ. ಕಳೆದ ವರ್ಷದ ಡಿಸೆಂಬರ್ 20ರಂದು ಅಸ್ಸಾಂನ ಹೋಜಾಯಿ ಜಿಲ್ಲೆಯ ಅರಣ್ಯ ವ್ಯಾಪ್ತಿಯಲ್ಲಿ ಆನೆಗಳ ಹಿಂಡೊಂದು ಹಳಿಯನ್ನು ದಾಟುತ್ತಿರುವಾಗ ಧಾವಿಸಿ ಬಂದ ಎಕ್ಸ್‌ಪ್ರೆಸ್ ರೈಲು ಹಿಂಡಿಗೆ ಡಿಕ್ಕಿ ಹೊಡೆದು 7 ಆನೆಗಳು ಮೃತಪಟ್ಟವು.

ಉದ್ದಕ್ಕಾಂಡ ರಾಜ್ಯದಲ್ಲಿ ಮಾನವ ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷಕ್ಕೆ ಕೊನೆ ಇಲ್ಲದಂತಾಗಿದೆ. ಹಾಸನ, ಚಾಮರಾಜನಗರ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಸೇರಿದಂತೆ ಅರಣ್ಯ ಭಾಗದ ಜಿಲ್ಲೆಗಳಲ್ಲಿ ಕಾಡಾನೆ, ಹುಲಿ, ಚಿರತೆ, ತೋಳ, ಕಾಡುಹಂದಿ, ಕರಡಿ, ಕಾಡುಕೋಣದಂಥ ವನ್ಯಜೀವಿಗಳ ಸಮಸ್ಯೆ ವಿಪರೀತಕ್ಕೆ ಹೋಗಿದೆ. ಇದರಿಂದ ರೈತರು, ಅರಣ್ಯದ ಅಂಚಿನಲ್ಲಿವಾಸಿಸುವ ಜನರು ಹಾಗೂ ಕೃಷಿ ಕೂಲಿ ಕಾರ್ಮಿಕರು ಸಂಕಷ್ಟ ಅನುಭವಿಸುವಂತಾಗಿದೆ.

ವಿಶೇಷವಾಗಿ ಮಲೆನಾಡಿನ ಭಾಗದಲ್ಲಿ ಕಳೆದ ಹಲವು ವರ್ಷಗಳಿಂದಲೂ ಕಾಡಾನೆ ದಾಳಿಗಳು ನಿರಂತರವಾಗಿ ನಡೆಯುತ್ತ ಅಮಾಯಕ ಜೀವಗಳನ್ನು ಬಲಿ ತೆಗೆದುಕೊಳ್ಳುತ್ತಿವೆ.

ಮೊನ್ನೆ ಭಾನುವಾರ ಚಿಕ್ಕಮಗಳೂರು ಜಿಯ ಹುಣಸೇಹಳ್ಳಿ ಸಮೀಪದ ಹೇರಂಬಿಪುರ ಗ್ರಾಮದಲ್ಲಿ ಕಾಡಾನೆ ದಾಳಿಯಿಂದ ಕಾರ್ಮಿಕ ಮಹಿಳೆಯೊಬ್ಬರು ಮೃತಪಟ್ಟರು. ಮೂಡಿಗೆರೆ, ಕಳಸ ತಾಲೂಕುಗಳಲ್ಲಿಯೂ ಇಂಥದೇ ಪ್ರಕರಣಗಳು ನಡೆದಿರುವುದು ಹಾಗೂ ಕಾಡಾನೆಗಳ ದಾಳಿಯಿಂದ ಅಪಾರ ಪ್ರಮಾಣದಲ್ಲಿ ಬೆಳೆಹಾನಿಯಾಗಿರುವುದು ವರದಿಯಾಗಿವೆ.

ಈ ಪಟ್ಟಿ ಇಷ್ಟಕ್ಕೇ ನಿಲ್ಲುವುದಿಲ್ಲ ಎಂಬುದು ಕಹಿ ವಾಸ್ತವ. ಕಳೆದ ಐದು ವರ್ಷಗಳಲ್ಲಿ ಕಾಡುಪ್ರಾಣಿಗಳ ದಾಳಿಗೆ ರಾಜ್ಯದಲ್ಲಿ ಒಟ್ಟು 289 ಮಂದಿ ಜೀವ ತೆತ್ತಿದ್ದಾರೆ. ಇಷ್ಟೆಲ್ಲಾ ದುರ್ಘಟನೆಗಳು ಸಂಭವಿಸಿದರೂ ಸಂಬಂಧಪಟ್ಟವರು ಸೂಕ್ತ ಬಂದೋಬಸ್ತ್‌ಗೆ ಮುಂದಾಗದಿರುವುದು ವಿಷಾದನೀಯ.

ಮಾನವನ ನಿರಂತರ ಹಸ್ತಕ್ಷೇಪ ಹಾಗೂ ಸರಕಾರಗಳ ನಿರ್ಲಕ್ಷ್ಯದಿಂದಾಗಿ ಜನರು ಮಾತ್ರವೇ ತೊಂದರೆಯನ್ನು ಎದುರಿಸುತ್ತಿಲ್ಲ, ಜತೆಗೆ ಕಾಡಾನೆ, ಹುಲಿ, ಚಿರತೆಯಂಥ ಅಪರೂಪದ ವನ್ಯಜೀವಿಗಳೂ ಕಣ್ಮರೆಯಾಗುತ್ತಿವೆ. ಕಳೆದ ವರ್ಷದ ಡಿಸೆಂಬರ್ 20ರಂದು ಅಸ್ಸಾಂನ ಹೋಜಾಯಿ ಜಿಲ್ಲೆಯ ಅರಣ್ಯ ವ್ಯಾಪ್ತಿಯಲ್ಲಿ ಆನೆಗಳ ಹಿಂಡೊಂದು ಹಳಿಯನ್ನು ದಾಟುತ್ತಿರುವಾಗ ಧಾವಿಸಿ ಬಂದ ಎಕ್ಸ್‌ಪ್ರೆಸ್ ರೈಲು ಹಿಂಡಿಗೆ ಡಿಕ್ಕಿ ಹೊಡೆದು 7 ಆನೆಗಳು ಮೃತ ಪಟ್ಟವು.

ಮತ್ತೊಂದೆಡೆ, ಕಾಡಾನೆಗಳ ಹಾವಳಿಯಿಂದ ರಕ್ಷಿಸಿಕೊಳ್ಳಲು ರೈತರು ತೋಟಕ್ಕೆ ಅಳವಡಿಸಿಕೊಳ್ಳುವ ವಿದ್ಯುತ್ ಬೇಲಿಯೂ ಅವಕ್ಕೆ ಮಾರಕವಾಗಿ ಪರಿಣಮಿಸುವುದಿದೆ. ಅರಣ್ಯನಾಶ, ವನ್ಯಜೀವಿಗಳ ಆವಾಸಸ್ಥಾನದ ಅಸಮರ್ಪಕ ನಿರ್ವಹಣೆ, ಅಧಿಕಾರಿಗಳ ನಿರ್ಲಕ್ಷ್ಯ, ಆನೆ ಕಾರಿಡಾರ್ ಇಲ್ಲದಿರುವಿಕೆ, ಆನೆದಂತ ಬೇಟೆ ಇತ್ಯಾದಿ ಕಾರಣಗಳಿಂದಾಗಿ ಕಾಡಾನೆಗಳು ಸಾವಿಗೀಡಾಗುತ್ತಿವೆ.

1992ರ ಫೆಬ್ರವರಿಯಲ್ಲಿ ಪ್ರಾಜೆಕ್ಟ್ ಎಲಿಫೆಂಟ್ ಅನ್ನು ಪ್ರಾರಂಭಿಸುವುದರೊಂದಿಗೆ ಭಾರತದಲ್ಲಿ ಆನೆ ಕಾರಿಡಾರ್‌ಗಳನ್ನು ಔಪಚಾರಿಕವಾಗಿ ಗುರುತಿಸಲಾಯಿತು. ಆಳಿವಿನ ಅಂಚಿನಲ್ಲಿರುವ ಏಷ್ಯನ್ ಆನೆಗಳನ್ನು ರಕ್ಷಿಸಲು, ಕುಗ್ಗುತ್ತಿರುವ ಅವುಗಳ ಆವಾಸಸ್ಥಾನವನ್ನು ನಿರ್ವಹಿಸಲು ಮತ್ತು ಮಾನವ-ಆನೆ ಸಂಘರ್ಷಗಳನ್ನು ಕಡಿಮೆ ಮಾಡಲು ಈ ಉಪಕ್ರಮವನ್ನು ಕೈಗೊಂಡರೂ, ನಿರ್ವಹಣೆಯ ಕೊರತೆಯಿಂದಾಗಿ ಆನೆ ಮತ್ತು ಮಾನವ ಸಂಘರ್ಷಗಳು ನಡೆಯುತ್ತಲೇ ಇವೆ.

ದೇಶದಲ್ಲೇ ಅತಿ ಹೆಚ್ಚು ಆನೆಗಳಿರುವ ರಾಜ್ಯ ಎಂಬ ಹೆಗ್ಗಳಿಕೆ ಕರ್ನಾಟಕದ್ದು; ವಿಪರ್ಯಾಸವೆಂದರೆ, ಪಶ್ಚಿಮ ಘಟ್ಟದ ಅರಣ್ಯ ಪ್ರದೇಶದಲ್ಲಿ ಆಶ್ರಯ ಪಡೆದಿರುವ ಆನೆಗಳಿಗೆ ಒಂದೆಡೆಯಿಂದ ಇನ್ನೊಂದೆಡೆಗೆ ಓಡಾಡಲು ಮಾರ್ಗವೇ ಇಲ್ಲದಂತಾಗಿದೆ. 2008ರಲ್ಲಿ ಕೊಡಗಿನ ಕಾಫಿ ಬೆಳೆಗಾರರೊಬ್ಬರು, ಮಾನವ-ಆನೆ ಸಂಘರ್ಷದಿಂದ ರಕ್ಷಿಸಬೇಕು ಎಂದು ಉಚ್ಚ ನ್ಯಾಯಾಲಯಕ್ಕೆ ಮೊರೆ ಹೋಗಿದ್ದರು.

ಆರ್ಜಿ ಪರಿಶೀಲಿಸಿದ ನ್ಯಾಯಾಲಯ, ಆನೆ ಹಾವಳಿಯಿರುವ ಪ್ರದೇಶದಲ್ಲಿ ಆನೆ ಕಾರಿಡಾರ್ ನಿರ್ಮಿಸುವಂತೆ ಆದೇಶಿಸಿತ್ತು. ಹಾಗಂತ ನಮ್ಮ ರಾಜ್ಯದಲ್ಲಿ ಆನೆ ಕಾರಿಡಾರ್ ಇಲ್ಲವೆಂದಲ್ಲ, 9 ಕಾರಿಡಾರ್‌ಗಳಿವೆ; ಆದರೂ ದುರ್ಘಟನೆಗಳ ಸಂಖ್ಯೆ ಹೆಚ್ಚುತ್ತಲೇ ಇದೆ. 2023ರಿಂದ 2025ರ ಜುಲೈವರೆಗೆ ರಾಜ್ಯದಲ್ಲಿ 240 ಆನೆಗಳು ಮೃತಪಟ್ಟಿದ್ದು, ಇವುಗಳಲ್ಲಿ 65 ಅಸಹಜ ಸಾವುಗಳಾಗಿವೆ. ಈ ಅಸಹಜ ಸಾವಿಗೆ ಅನೇಕ ಕಾರಣಗಳಿವೆ.

ಪಶ್ಚಿಮ ಘಟ್ಟ ಪ್ರದೇಶದ ಜಿಲ್ಲೆಗಳಲ್ಲಿ ಮಾನವ-ವನ್ಯಜೀವಿ ಸಂಘರ್ಷ ಹೆಚ್ಚುತ್ತಿದೆ. ಕಾಫಿ-ಚಹಾ ತೋಟಗಳು ವಿಸ್ತರಣೆಯಾಗುತ್ತಿರುವುದು, ಮಾನವನ ಹಸ್ತಕ್ಷೇಪ, ಒತ್ತುವರಿ ಯೋಜನೆಗಳು, ಅಭಿವೃದ್ಧಿ ಯೋಜನೆಗಳು ಆನೆಗಳಿಗೆ ಮಾರಕವಾಗುತ್ತಿದೆ ಎನ್ನುತ್ತದೆ 2025ರಲ್ಲಿ ಬಿಡುಗಡೆಯಾದ ಆನೆಗಳ ಸ್ಥಿತಿಗತಿ ವರದಿ.

ಎಲ್ಲದಕ್ಕೂ ಆನೆ ಕಾರಿಡಾರ್ ಪರಿಹಾರವಲ್ಲ; ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಯಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ವಹಣೆ, ಆನೆತಡೆ ಕಂದಕ ನಿರ್ಮಾಣ ಮತ್ತು ನಿರ್ವಹಣೆ, ಕಾಡಾನೆ ಹಾವಳಿಯ ತಡೆಗೆ ಜಿಲ್ಲೆಗೊಂದರಂತೆ ಅಧಿಕಾರಿ/ಸಿಬ್ಬಂದಿಗಳನ್ನು ಒಳಗೊಂಡ ಆನೆ ಕಾರ್ಯಪಡೆಯ ನಿಯೋಜನೆ, ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ಕೆರೆಗಳ ನಿರ್ಮಾಣ ಮುಂತಾದ ಕ್ರಮಗಳ ಕುರಿತೂ ಗಮನಹರಿಸಬೇಕು.



ಅರಣ್ಯ ಪ್ರದೇಶಗಳಲ್ಲಿ ಹುಲ್ಲುಗಾವಲು ಸಂರಕ್ಷಣೆ ಅತ್ಯಗತ್ಯವಾಗಿದೆ; ಏಕೆಂದರೆ, ಹೆಚ್ಚಿನ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನಾ ಮತ್ತು ಯುಪಟೋರಿಯಂ ಕಳೆಗಳಿಂದಾಗಿ ಹುಲ್ಲಿನ ಬೆಳವಣಿಗೆಗೆ ತೀವ್ರ ಅಡಚಣೆಯಾಗಿ, ಆದರ ಲಭ್ಯತೆ ಗಣನೀಯವಾಗಿ ಕಡಿಮೆಯಾಗಿದೆ.

ಇಂಥ ಎಲ್ಲ ಕ್ರಮಗಳನ್ನೂ ಪರಿಣಾಮಕಾರಿಯಾಗಿ ಜಾರಿಗೆ ತರುವತ್ತ ಸರಕಾರ ಮತ್ತು ಅರಣ್ಯ ಇಲಾಖೆ ಕಟಿಬದ್ಧವಾಗಬೇಕು. ಇಷ್ಟು ಮಾತ್ರವಲ್ಲದೆ, ಆಧುನಿಕ ತಂತ್ರಜ್ಞಾನದ ಒತ್ತಾಸೆಯನ್ನೂ ಪಡೆದುಕೊಳ್ಳಬೇಕಿದೆ. ಆನೆಗಳ ಚಲನವಲನವನ್ನು ಮೊದಲೇ ತಿಳಿದು ಕೊಂಡು, ಅವುಗಳ ಹಿಂಡನ್ನು ದೂರ ಓಡಿಸಲು ಸಾಧ್ಯ ಎಂಬುದನ್ನು ದಕ್ಷಿಣ ಆಫ್ರಿಕಾದ ಭೂವಿಜ್ಞಾನಿ ಆಲಿವರ್ ಲ್ಯಾಂಬ್ 2021ರಲ್ಲಿ ತಮ್ಮ ಯಶಸ್ವಿ ಪ್ರಯೋಗದ ಮೂಲಕ ಕಂಡುಕೊಂಡರು.

ಉತ್ತರ ಕೆರೊಲಿನಾದ ಕಾಲೇಜೊಂದರಲ್ಲಿ ಭೂ ವಿಜ್ಞಾನ ವಿಭಾಗದಲ್ಲಿ ದುಡಿಯುತ್ತಿದ್ದ ಲ್ಯಾಂಬ್, ಸಕ್ರಿಯ ಜ್ವಾಲಾಮುಖಿಗಳಂಥ ನೈಸರ್ಗಿಕ ವಿದ್ಯಮಾನಗಳನ್ನು ಅಧ್ಯಯನ ಮಾಡಲು ಭೂಕಂಪಶಾಸ್ತ್ರ ಮತ್ತು ಇನ್- ಸೌಂಡ್ ಅನ್ನು ಬಳಸಬಹುದು ಎಂಬುದನ್ನು ತೋರಿಸಿಕೊಟ್ಟರು.

ಕಳ್ಳ ಬೇಟೆಗಾರರ ಕಾರಣದಿಂದಾಗಿ ದಕ್ಷಿಣ ಆಫ್ರಿಕಾದ ಈಶಾನ್ಯ ಭಾಗದ ಅಭಯಾರಣ್ಯದಲ್ಲಿ ಬಿಳಿ ಆನೆಗಳ ಸಂತತಿ ನಶಿಸುವ ಹಂತದಲ್ಲಿತ್ತು. ಈ ಆನೆಗಳ ಸಂರಕ್ಷಣೆಗಾಗಿ ಅವರು, ನಿರ್ದಿಷ್ಟ ಸಾಧನಗಳನ್ನು ಅಲ್ಲಲ್ಲಿ ಅಳವಡಿಸುವ ಮೂಲಕ ಆನೆಗಳ ನಡೆ ಬಗ್ಗೆ ಮುನ್ಸೂಚನೆ ಪಡೆಯಬಹುದೇ ಎಂದು ಪ್ರಯೋಗ ನಡೆಸಿದರು. ಅಂದರೆ, ಸುಮಾರು 300 ಮೀಟರ್‌ವರೆಗೆ ಧ್ವನಿಕಂಪನ ವನ್ನು ಒಯ್ಯಬಲ್ಲ ಮೈಕ್ರೋಫೋನ್ ಉಪಕರಣ ವನ್ನು ಲ್ಯಾಂಬ್ ಅಲ್ಲಲ್ಲಿ ಅಳವಡಿಸಿದರು.

ಆನೆಗಳು ನಡೆದಾಡುವಾಗ ನೆಲದಲ್ಲಿ 110 ಡೆಸಿಬೆಲ್ ಪ್ರಮಾಣದ ಕಂಪನ ಉಂಟಾಗುತ್ತದೆ ಮತ್ತು ಅದು ದೊಡ್ಡದಾಗಿಯೇ ಕೇಳಿಸುತ್ತದೆ. ಹೀಗಾಗಿ ಆನೆಗಳಿಗೆ ರೇಡಿಯೋ ಕಾಲರ್ ಅಳವಡಿಸುವ ಅಗತ್ಯವೇ ಇಲ್ಲದೆ, ಅವು ಎಷ್ಟಿವೆ, ಎಲ್ಲಿವೆ ಎಂಬುದನ್ನು ಕುಳಿತಲ್ಲಿಂದಲೇ ತಿಳಿಯುವುದು ಸಾಧ್ಯವಾಯಿತು. ಆನೆಗಳು ಎಲ್ಲಿವೆ ಎಂಬುದು ಗೊತ್ತಾದ ಮೇಲೆ ಅವುಗಳ ರಕ್ಷಣೆಗೂ ಧಾವಿಸಬಹುದು, ಹಿಂಡಿನಿಂದ ಬೇರ್ಪಟ್ಟ ಪುಂಡಾನೆ ಎಷ್ಟು ದೂರದಲ್ಲಿದೆ ಎಂಬುದನ್ನು ತಿಳಿದುಕೊಂಡು ಅದನ್ನು ಹಿಂಡಿಗೆ ಮರಳಿ ಸೇರಿಸಬಹುದು ಎಂಬುದನ್ನು ಲ್ಯಾಂಬ್ ತೋರಿಸಿಕೊಟ್ಟರು.

ಆನೆಗಳ ಹಿಂಡು 165 ಅಡಿ ದೂರವನ್ನು ತಲುಪಿದಾಗ ಅದು ಎಚ್ಚರಿಕೆಯ ಗಂಟೆಯನ್ನು ಬಡಿಯುವ ಮೂಲಕ ಜಾಗೃತಗೊಳಿಸುತ್ತದೆ; ಇದರಿಂದ ಅವುಗಳ ವೇಗವನ್ನು ಸುಲಭವಾಗಿ ಅರಿತು ದೂರಕ್ಕೆ ಓಡಿಸುವುದಾಗಲೀ, ಬೆಳೆ ಸಂರಕ್ಷಣೆ ಮಾಡುವುದಾಗಲೀ ಸಾಧ್ಯವಿದೆ ಎಂಬುದನ್ನು ಲ್ಯಾಂಬ್ ನಿದರ್ಶಿಸಿದರು.

ಇಂಥ ಉಪಕರಣಗಳನ್ನು ಸಿದ್ಧಪಡಿಸುವ ಮೊದಲು, ನಿರ್ದಿಷ್ಟ ಪ್ರದೇಶದ ಭೂರಚನಾ ಶಾಸ್ತ್ರ, ಮಣ್ಣಿನ ಸ್ಥಿತಿಗತಿಯ ಅಧ್ಯಯನ ಮುಖ್ಯವಾಗುತ್ತದೆ. ಶಕ್ತಿಶಾಲಿ ಮೈಕ್ರೋ ಫೋನ್‌ಗಳನ್ನು ಬಳಸುವುದರಿಂದ ಕಿಲೋಮೀಟರ್ ನಷ್ಟುವ್ಯಾಪ್ತಿಯಲ್ಲಿಆನೆಗಳು ಬರುತ್ತಿರುವುದನ್ನು ಅರಿಯಲು ಸಾಧ್ಯವಾಗುತ್ತದೆ.

ಇಂಥ ಉಪಕ್ರಮಗಳಿಂದ ಆನೆಗಳ ಉಪಟಳ ನಿಲ್ಲುತ್ತದೆ ಎಂದೇನಲ್ಲ. ನಾವಿಂದು ವೀಕೆಂಡ್ ವಿರಾಮಕ್ಕಾಗಿ ಕಾಡಿನ ಮಧ್ಯದಲ್ಲಿ ರೆಸಾರ್ಟ್/ಹೋಮ್‌ಸ್ಟೇಗಳನ್ನು ನಿರ್ಮಿಸುತ್ತಿದ್ದೇವೆ. ಅರಣ್ಯ ಮೀಸಲು ಪ್ರದೇಶ, ಸಂರಕ್ಷಿತ ವಲಯಗಳಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಆನೆ ನಡೆದದ್ದೇ ದಾರಿ ಎಂಬ ಮಾತೊಂದು ಇರುವಾಗ, ಆನೆಗಳಿಗೆ ಮಾನವ ನಿರ್ಮಿತ ಕಾರಿಡಾರ್‌ನ ಅಗತ್ಯವಿಲ್ಲ.

ಅವಕ್ಕೆ ಬೇಕಿರುವುದು ಅವುಗಳದ್ದೇ ಆದ ಕಾಡು. ಇದನ್ನು ಪ್ರಜ್ಞಾವಂತ ನಾಗರಿಕರಾದ ನಾವು, ನಮ್ಮ ಆಳುಗರು ಅರಿತುಕೊಂಡರೆ ಸಾಕು...

- ಸುರೇಂದ್ರ ಪೈ, ಭಟ್ಕಳ

ದಿಲ್ಲಿಯ ಹಳೆಯ ವಾಹನ ಅಕ್ರಮ ಮಾರಾಟ ದಂಧೆಗೆ ಕಡಿವಾಣ ಅಗತ್ಯ

ಹೊಸದಿಲ್ಲಿಯಲ್ಲಿ ಗುಜರಿಯಾಗಿ ಪರಿಗಣಿಸಲ್ಪಟ್ಟಿರುವ 10 ವರ್ಷ ಬಳಕೆಯಾದ ವಾಹನಗಳಿಗೀಗ ಕರ್ನಾಟಕ ಡಂಪಿಂಗ್ ಯಾರ್ಡ್ ಆಗಿ ಮಾರ್ಪಟ್ಟಿದೆಯೇ ಎಂಬ ಗುಮಾನಿ ವ್ಯಕ್ತವಾಗತೊಡಗಿದೆ. ಬೆಂಗಳೂರು ಮಾತ್ರವಲ್ಲದೆ ರಾಜ್ಯದ ಗ್ರಾಮೀಣ ಪ್ರದೇಶಗಳ ಸಹಿತ ರಾಜ್ಯದೆಲ್ಲೆಡೆ ಈಗ ದಿಲ್ಲಿಯಲ್ಲಿ ನೋಂದಣಿಯಾದ ಕಾರುಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಳ್ಳಲಾರಂಭಿಸಿವೆ. ದಿನಗಳೆದಂತೆ ಇದೊಂದು ದಂಧೆಯಾಗಿ ಮಾರ್ಪಟ್ಟಿದ್ದು ಗ್ರಾಮೀಣ ಭಾಗಗಳಲ್ಲಿ ಈ ವಾಹನಗಳ ಓಡಾಟ ಒಂದಿಷ್ಟು ಆತಂಕಕ್ಕೆ ಕಾರಣವಾಗಿದೆ.

ದೇಶದ ರಾಜಧಾನಿ ದಿಲ್ಲಿಯಲ್ಲಿ ವಾಯುಮಾಲಿನ್ಯ ತೀರಾ ಅಪಾಯಕಾರಿ ಮಟ್ಟಕ್ಕೆ ತಲುಪಿರುವ ಹಿನ್ನೆಲೆಯಲ್ಲಿ ವಾಹನಗಳನ್ನು ಗರಿಷ್ಠ 10 ವರ್ಷಗಳವರೆಗೆ ಮಾತ್ರ ಬಳಸಲು ಸರಕಾರ ಅನುಮತಿ ನೀಡಿದೆ. 10 ವರ್ಷದ ಬಳಿಕ ಈ ವಾಹನಗಳನ್ನು ಗುಜರಿಯಾಗಿ ಪರಿಗಣಿಸಲು ಸರಕಾರ ನಿರ್ಧರಿಸಿದೆ. ಗುಜರಿಗೆ ಹಾಕುವುದಕ್ಕಿಂತ ಹೆಚ್ಚಿನ ಮೊತ್ತಕ್ಕೆ ಈ ವಾಹನಗಳು ಹೊರ ರಾಜ್ಯಗಳಲ್ಲಿ ಬಿಕರಿಯಾಗುತ್ತಿರುವುದರಿಂದ ಹಳೆಯ ವಾಹನಗಳ ಮಾಲಕರು ಮಧ್ಯವರ್ತಿಗಳಿಗೆ ಸಿಕ್ಕಷ್ಟು ಬೆಲೆಗೆ ತಮ್ಮ ವಾಹನಗಳನ್ನು ಮಾರಾಟ ಮಾಡುತ್ತಿದ್ದಾರೆ. ಸದ್ಯ ಈ ವಾಹನಗಳಿಗೆ ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಹೆಚ್ಚಿನ ಬೇಡಿಕೆ ಇದೆ. ಕೋಟ್ಯಂತರ ರೂ. ಬೆಲೆಬಾಳುವ ವಾಹನಗಳು ಮಾತ್ರವಲ್ಲದೆ ಮಾಧ್ಯಮ ವರ್ಗದ ಜನರು ಬಳಸುವ ವಾಹನಗಳು ಕೂಡ ಕಡಿಮೆ ಬೆಲೆಯಲ್ಲಿ ರಾಜ್ಯದಲ್ಲಿ ಮಾರಾಟವಾಗುತ್ತಿದೆ. ಸಹಜವಾಗಿಯೇ ಈ ಐಷಾರಾಮಿ ಕಾರುಗಳತ್ತ ಜನರು ಆಕರ್ಷಿತರಾಗುತ್ತಿದ್ದು ಇವುಗಳ ಖರೀದಿಗೆ ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ.

ದಿಲ್ಲಿಯ ಹಳೆಯ ವಾಹನಗಳಿಗೆ ಕರ್ನಾಟಕ ಬಲು ದೊಡ್ಡ ಮಾರುಕಟ್ಟೆಯಾಗಿ ರೂಪುಗೊಳ್ಳುತ್ತಿದ್ದಂತೆ ಮಧ್ಯವರ್ತಿಗಳು, ಅಕ್ರಮ ವಾಹನ ಮಾರಾಟ ದಂಧೆಕೋರರು ಇದರ ಲಾಭ ಪಡೆಯಲು ಮುಂದಾಗಿದ್ದಾರೆ. ತಮ್ಮ ಅಕ್ರಮ ದಂಧೆಗೆ ಇನ್ನಿಲ್ಲದ ತಂತ್ರ ಗಾರಿಕೆಯನ್ನು ಬಳಸಲಾರಂಭಿಸಿದ್ದಾರೆ. 10 ವರ್ಷಗಳ ಪಹಳೆಯ ಕಾರುಗಳ ನಕಲಿ ದಾಖಲೆಗಳ ಸೃಷ್ಟಿಸಿ, ಈ ಕಾರುಗಳ ಮೀಟರ್‌ಗಳನ್ನು ತಿರುಚಿ ಕಡಿಮೆ ಕಿ.ಮೀ. ಓಡಿದಂತೆ ತೋರಿಸುವುದು, ಹಳೆಯ ಬಿಡಿಭಾಗಗಳ ಜೋಡಣೆ, ನಕಲಿ ನಂಬರ್ ಪ್ಲೇಟ್ ಅಳವಡಿಕೆ, ಚಾಸಿಸ್ ನಂಬರ್ ಬದಲಾವಣೆ, ಕಳವುಗೈದ ವಾಹನಗಳ ಮಾರಾಟದಂತಹ ಅಕ್ರಮಗಳನ್ನು ರಾಜಾರೋಷವಾಗಿ ನಡೆಸತೊಡಗಿದ್ದಾರೆ. ಈ ಅಕ್ರಮ ದಂಧೆಕೋರರು ದಿಲ್ಲಿಯಲ್ಲಿ 10 ವರ್ಷ ಬಳಕೆಯಾದ ವಾಹನಗಳಿಗೆ ಸರಾಗವಾಗಿ ನಿರಾಕ್ಷೇಪಣ ಪತ್ರ ಪಡೆದು ಅವುಗಳನ್ನು ಕರ್ನಾಟಕಕ್ಕೆ ತಂದು ಮಾರಾಟ ಮಾಡಲಾರಂಭಿಸಿದ್ದಾರೆ. ಕಡಿಮೆ ಬೆಲೆಯಲ್ಲಿ ಐಷಾರಾಮಿ ಸಹಿತ ಸಾಮಾನ್ಯ ಕಾರುಗಳು ಲಭಿಸುತ್ತಿವೆ ಎಂಬ ಸಂಭ್ರಮದಲ್ಲಿ ರಾಜ್ಯದ ಅದರಲ್ಲೂ ಗ್ರಾಮೀಣ ಪ್ರದೇಶದ ವಾಹನ ಖರೀದಿದಾರರು ಮೋಸ ಹೋಗುತ್ತಿದ್ದಾರೆ. ಬಹುತೇಕ ಎಲ್ಲ ಕಂಪೆನಿಗಳ ಕಾರುಗಳು ಅಗ್ಗದ ಬೆಲೆಯಲ್ಲಿ ಲಭಿಸುತ್ತಿರುವುದರಿಂದ ಜನ ಕೂಡ ಈ ಅಕ್ರಮಗಳತ್ತ ತಲೆಕೆಡಿಸಿಕೊಳ್ಳದೆ ಈ ವಾಹನಗಳ ಖರೀದಿಗೆ ಮುಗಿ ಬೀಳತೊಡಗಿದ್ದಾರೆ.

ಅಕ್ರಮವಾಗಿ ಅದರಲ್ಲೂ ಕಳವುಗೈದವರಲ್ಲೂ ಕಳವುಗೈದ ವಾಹನಗಳನ್ನು ಕಿಡಿಗೇಡಿಗಳು ತಮ್ಮ ದುಷ್ಕೃತ್ಯಗಳನ್ನು ಎಸಗಲು, ವಿವಿಧ ಅಪರಾಧ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿರುವ ಪ್ರಕರಣಗಳು ವರದಿಯಾಗತೊಡಗಿದ್ದು ಇದು ನಿಜಕ್ಕೂ ಕಳವಳಕಾರಿ ಬೆಳವಣಿಗೆ ಇಂತಹ ವಾಹನಗಳನ್ನು ಬಳಸಿ ಅಪರಾಧ ಕೃತ್ಯಗಳನ್ನು ಎಸಗಿದ ಸಂದರ್ಭದಲ್ಲಿ ಆರೋಪಿಗಳನ್ನು ಪತ್ತೆ ಹಚ್ಚುವುದು ಕೂಡ ಪೊಲೀಸರಿಗೆ ಬಲುದೊಡ್ಡ ಸವಾಲಾಗಿ ಪರಿಣಮಿಸಲಿದೆ. ಇವೆಲ್ಲವನ್ನು ಗಮನದಲ್ಲಿರಿಸಿಕೊಂಡು ರಾಜ್ಯದ ಸಾರಿಗೆ ಮತ್ತು ಪೊಲೀಸ್ ಇಲಾಖೆ ದಿಲ್ಲಿಯಲ್ಲಿ ನೋಂದಣಿಯಾಗಿರುವ ವಾಹನಗಳ ಮೇಲೆ ಹೆಚ್ಚಿನ ನಿಗಾ ಇರಿಸುವ ಅಗತ್ಯವಿದೆ. ಆರಂಭದಲ್ಲಿಯೇ ಈ ಅಕ್ರಮ ದಂಧೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಈ ಎರಡೂ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಈ ವಾಹನಗಳ ನೋಂದಣಿ ಪ್ರಮಾಣಪತ್ರದ ವರ್ಗಾವಣೆಯ ಸಂದರ್ಭದಲ್ಲಿಯೇ ಸಾರಿಗೆ ಅಧಿಕಾರಿಗಳು ಈ ವಾಹನಗಳ ದಾಖಲೆ ಪತ್ರ, ಪ್ರಮಾಣಪತ್ರಗಳ ಸಾಚಾತನವನ್ನು ಖಾತರಿಪಡಿಸಿಕೊಳ್ಳಬೇಕು.

ಇದೆ ಶಾ

ಸ್ತ್ರಿಗಳ ಮಗನ ಪ್ರಕಾರ ಊರಲ್ಲಿರುವುದು ವ್ಯರ್ಥ. ಅಲ್ಲಿ ಏನೂ ಇಲ್ಲ. ನಾಲ್ಕು ಗೋಡೆಗಳನ್ನು ಕಟ್ಟಿ ಬದುಕು ಕಟ್ಟಿಕೊಂಡಿದ್ದಾರೆ ಅದರೆ, ಪ್ರಸ್ತುತ ಕಾಲಘಟ್ಟದಲ್ಲಿ ಅಲ್ಲಿ ಅದ್ಭುತವಾದ ಬದುಕು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಶಿಕ್ಷಣದ ಕೊರತೆ ಕಂಡಿರುವ ಊರು ಉದ್ಯೋಗ ಹುಡುಕುವುದಕ್ಕೆ ಯಾವ ಅವಕಾಶವೂ ಅಲ್ಲ ಹೊಸ ಉದ್ಯಮ ಹೊಸ ವಸ್ತುಗಳು ಅಲ್ಲಿಗೆ ಪರಿಚಯವ

6 ಕೋ. ರೂ. ವೆಚ್ಚದಲ್ಲಿ ಅರಕಲಗೂಡು ಮುಖ್ಯರಸ್ತೆ ಅಭಿವೃದ್ಧಿ

ಡಿಗ್ರಿ ಕಾಲೇಜ್‌ನಿಂದ ತಾಲ್ಲೂಕು ಕಚೇರಿ ತನಕ 30 ಮೀಟರ್ ಅಂತರದಲ್ಲಿ ಅಭಿವೃದ್ಧಿ: ಶಾಸಕ ಎ.ಮಂಜು

• ಪ್ರಜೋದಯ ವರದಿ

ಅರಕಲಗೂಡು: ಪಟ್ಟಣದ ಮುಖ್ಯ ರಸ್ತೆಯನ್ನು 6 ಕೋಟಿ ರೂ.ಗಳ ವೆಚ್ಚದಲ್ಲಿ ಆಧುನಿಕವಾಗಿ ಅಭಿವೃದ್ಧಿಗೊಳಿಸಲಾಗುವುದು ಎಂದು ಶಾಸಕ ಎ.ಮಂಜು ಅವರು ತಿಳಿಸಿದರು.

ಪಟ್ಟಣದ ಇಂದಿರಾ ಕ್ಯಾಂಟೀನ್ ಮುಂಭಾಗದಲ್ಲಿ ಬುಧವಾರ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಡಿಗ್ರಿ ಕಾಲೇಜ್‌ನಿಂದ ಆರಂಭಗೊಳ್ಳುವ ರಸ್ತೆ ತಾಲ್ಲೂಕು ಕಚೇರಿ ತನಕ 30 ಮೀಟರ್ ಅಂತರದಲ್ಲಿ ಅಭಿವೃದ್ಧಿಗೊಳ್ಳಲಿದೆ. ಇದರೊಂದಿಗೆ ಎರಡು ಮೀಟರ್ ಸಾರ್ವಜನಿಕ ಫುಟ್‌ಪಾತ್ ಎರಡು ಕಡೆಯು ಚರಂಡಿ ನಿರ್ಮಾಣಗೊಳ್ಳಲಿದೆ. ಪ್ರಮುಖವಾಗಿ ಬಸವೇಶ್ವರ ವೃತ್ತ, ಅನಕೃ ವೃತ್ತ, ದೊಡ್ಡಮ್ಮ ವೃತ್ತ ಮತ್ತು ನಂಜೇಗೌಡ ವೃತ್ತಗಳ ಬಳಿ ವಿಶೇಷವಾಗಿ ರಸ್ತೆ ಅಭಿವೃದ್ಧಿಗೊಳ್ಳಲಿದೆ.ಸಾರ್ವಜನಿಕರು ಖುದ್ದು ನಿಂತು ರಸ್ತೆ ಅಭಿವೃದ್ಧಿಯನ್ನು ಮಾಡಿಸಿಕೊಂಡು ಪಟ್ಟಣದ ಅಂದಕ್ಕೆ ಸಹಕಾರ ನೀಡಬೇಕೆಂದು ಅವರು ಮನವಿ ಮಾಡಿದರು.

ಈ ನೂತನ ರಸ್ತೆ ಅಭಿವೃದ್ಧಿಗೆ ಹೊಂದಿಕೊಂಡಂತೆ ಒಟ್ಟು 27 ಸಂಪರ್ಕ ರಸ್ತೆಗಳು ಬರುತ್ತವೆ. ಇವುಗಳಿಗೆ 30 ಮೀಟರ್ ದೂರದ ತನಕ ಇದೇ ಮಾದರಿಯಲ್ಲಿ ಅಂತಹ ರಸ್ತೆಗಳನ್ನು ಸಹ ಅಭಿವೃದ್ಧಿಗೊಳಿಸಬೇಕಿದೆ. ಮುಂದಿನ ದಿನಗಳಲ್ಲಿ ಮಳೆಗಾಲ ಆರಂಭಗೊಳ್ಳುವ ಸೂಚನೆ ಇದ್ದು, ತ್ವರಿತವಾಗಿ ರಸ್ತೆ ಕಾಮಗಾರಿಯನ್ನು ಕೈಗೊಂಡು ನಿಗದಿತ ಅವಧಿಯಲ್ಲಿ ಗುಣಮಟ್ಟದಿಂದ ರಸ್ತೆಯನ್ನು ನಿರ್ಮಿಸಿಕೊಡಬೇಕೆಂದು ಎಂಜಿನಿಯರ್, ಗುತ್ತಿಗೆದಾರನಿಗೆ ಸೂಚಿಸಿದರು.

ಪಟ್ಟಣದಲ್ಲಿ ನೂತನವಾಗಿ ಅಭಿವೃದ್ಧಿಗೊಳ್ಳುತ್ತಿರುವ ರಸ್ತೆಯಿಂದ ಪಟ್ಟಣದ ಮುಖ್ಯ ರಸ್ತೆ ಮಾದರಿ ಹೊಸರೂಪ ಪಡೆದುಕೊಳ್ಳಲಿದೆ. ಇದಲ್ಲದೇ ಪಟ್ಟಣದ ಹಳೆಯ ಮುಖ್ಯರಸ್ತೆ ಕೂಡ ಒಂದು ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಗೊಳ್ಳಲಿದೆ. ಈ ಕಾಮಗಾರಿಗೂ ಕೂಡ ಚಾಲನೆ ನೀಡಲಾಗುವುದು. ಶಾಸಕರ ಅನುದಾನದಲ್ಲಿ ಪಟ್ಟಣದ ರಸ್ತೆಬದಿ ವ್ಯಾಪಾರಿಗಳ ಅಪೇಕ್ಷೆಯ ಫುಡ್ ಕೋರ್ಟ್ ಕಾಮಗಾರಿಗೂ ಚಾಲನೆ ದೊರೆಯಲಿದೆ. ಬಸ್ ನಿಲ್ದಾಣ ಮುಂಭಾಗದಿಂದ ಆರಂಭಗೊಂಡು ಕುವೆಂಪು ಉದ್ಯಾನವನ ತನಕವೂ ಫುಡ್ ಕೋರ್ಟ್ ನಿರ್ಮಾಣಗೊಳ್ಳಲಿದೆ. ಸ್ಲ್ಯಾಬ್ ಸಿಸ್ಟಂನಲ್ಲಿ ಯೋಜನೆ ರೂಪಿಸಲಾಗಿದೆ. ಕೆಳಭಾಗದಲ್ಲಿ ವಾಹನ ನಿಲುಗಡೆ, ರಸ್ತೆಗೆ ಹೊಂದಿಕೊಂಡತ್ತೆ ಫುಡ್ ಕೋರ್ಟ್ ಅಭಿವೃದ್ಧಿಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ಜನತಾ ಸೈಟ್ ವಿತರಣೆ: ಪಟ್ಟಣದ ಜನತೆ ಬಹುನಿರೀಕ್ಷಿತ ಜನತಾ ನಿವೇಶನ ಹಂಚಿಕೆಗೆ ಒಂದೆರಡು ತಿಂಗಳಲ್ಲಿ ಕೈಗೊಳ್ಳಲಾಗುವುದು. ಹಾಲಿ 250ಕ್ಕೂ ಹೆಚ್ಚಿನ ಖಾಲಿ ನಿವೇಶನಗಳು ಇವೆ. ಇದರೊಂದಿಗೆ ಪ್ರತ್ಯೇಕವಾಗಿ ನಿವೇಶನಗಳನ್ನು ಅಭಿವೃದ್ಧಿಗೊಳಿಸಿ ನೀಡುವ ಯೋಜನೆ ಸಹ ಸಿದ್ದಗೊಂಡಿದೆ. ಈ ಹಿಂದೆ ನಾನು ಸಚಿವನಾಗಿದ್ದ ವೇಳೆ ಖಾಲಿ ನಿವೇಶನ ಹಂಚಲು ಕ್ರಮ ವಹಿಸಲಾಗಿತ್ತಾದರೂ ಅಂತಿಮವಾಗಿ ಸಾಧ್ಯವಾಗಲಿಲ್ಲ. ಈಗ ನಾನೇ ಶಾಸಕನಾಗಿದ್ದೇನೆ. ಇನ್ನು ಮುಂದೂಡುವ ಸಾಧ್ಯತೆ ಇಲ್ಲ. ಅರ್ಹ ಬಡವರನ್ನು ಗುರುತಿಸಿ ಮತ್ತು ನಿವೇಶನ ಹೊಂದಿಲ್ಲದ ಬಡವರಿಗೆ ನಿವೇಶನ ನೀಡಲಾಗುವುದು ಎಂದು ಶಾಸಕ ಮಂಜು ಅವರು ಭರವಸೆ ನೀಡಿದರು.

ರಸ್ತೆ ನಿಯಮ ಉಲ್ಲಂಘನೆ: ಪಟ್ಟಣದ ಮುಖ್ಯ ರಸ್ತೆಯಲ್ಲಿ ವಾಣಿಜ್ಯ ಮಳಿಗೆಗಳು ಯಾವುದೇ ಪರವಾನಗಿ ಪಡೆಯದೆ ನಿರ್ಮಾಣಗೊಳ್ಳುತ್ತಿರುವ ಬಗ್ಗೆ ದೂರು ಕೇಳಿಬರುತ್ತಿದೆ.ಯಾರೇ ನಿಯಮ ಉಲ್ಲಂಘನೆ ಮಾಡಿ ಮನೆ ಅಥವಾ ವಾಣಿಜ್ಯ ಮಳಿಗೆ ನಿರ್ಮಿಸಿದ್ದರೇ ಅಥವಾ ನಿರ್ಮಿಸುತ್ತಿದ್ದರೇ ಅಂತವರ ವಿರುದ್ಧ ನಿರ್ಧಾಕ್ಷ್ಯಿಣ್ಯವಾಗಿ ಕ್ರಮವಹಿಸಬೇಕೆಂದು ಪಪಂ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ನರಸೇಗೌಡ, ಕೃಷ್ಣೇಗೌಡ, ಮಂಜು ಶೆಟ್ಟಿಗೌಡ, ದಿವಾಕರ್‌ಗೌಡ, ಪುಟ್ಟರಾಜು ಇನ್ನಿತರರು ಹಾಜರಿದ್ದರು.

ರೈತರಿಗೆ ಭರ್ಜರಿ ಸುದ್ದಿ ಸಾಧ್ಯತೆ

ಹಾಲಿನ ಪ್ರೋತ್ಸಾಹಧನ 7 ರೂ.ಗೆ ಹೆಚ್ಚಿಸಲು ಪ್ರಸ್ತಾವನೆ

• ಪ್ರಜೋದಯ ವರದಿ

ಬೆಂಗಳೂರು: ಕರ್ನಾಟಕ ರಾಜ್ಯ ಹಾಲು ಉತ್ಪಾದನೆ ವಿಚಾರದಲ್ಲಿ ಇಡೀ ಜಗತ್ತಿಗೆ ಮಾದರಿ ಆಗಿದ್ದು, ಕೆಎಂಎಫ್ ಜಗತ್ತಿನಾದ್ಯಂತ ತನ್ನ ವ್ಯಾಪಾರ ವಿಸ್ತರಣೆ ಮಾಡಿದೆ. ಈ ಮೂಲಕ ಕನ್ನಡ ನಾಡಿನ ರೈತರಿಗೆ ಲಕ್ಷ ಲಕ್ಷ ಆದಾಯ ಗಳಿಸುವುದು ಕೂಡ ಸಾಧ್ಯವಾಗುತ್ತಿದ್ದು, ಹಾಲು ಉತ್ಪಾದಕರ ಪ್ರೋತ್ಸಾಹಧನ ಪ್ರತಿ ಲೀಟರ್‌ಗೆ 5 ರೂ.ಗಳಿಂದ 7 ರೂ.ಗೆ ಹೆಚ್ಚಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ.

ಹಾಲು ಉತ್ಪಾದಕರಿಗೆ ನೀಡುತ್ತಿರುವ ಪ್ರೋತ್ಸಾಹಧನ ಶೀಘ್ರ ಏರಿಕೆ ಮಾಡಬೇಕು ಎನ್ನುವ ಬೇಡಿಕೆ ಹಲವು ದಿನಗಳಿಂದ ಇದೆ. ಅದರಲ್ಲೂ ಡಿಸೆಂಬರ್ ತಿಂಗಳಲ್ಲಿ ನಡೆದಿದ್ದ ಬೆಳಗಾವಿ ವಿಧಾನಸಭೆ ಅಧಿವೇಶನದ ಸಮಯದಲ್ಲಿ ಸಿಎಂ ಸಿದ್ದರಾಮಯ್ಯ ಪ್ರೋತ್ಸಾಹಧನ ಏರಿಸುವುದಾಗಿ ಘೋಷಿಸಿದ್ದರು. ಆದರೆ ಈವರೆಗೂ ಘೋಷಣೆ ಜಾರಿ ಆಗಿಲ್ಲ ಎಂಬ ಚರ್ಚೆಗಳು ನಡೆಯುವಾಗ ಇದೀಗ ಕರ್ನಾಟಕ ಹಾಲು ಮಹಾ ಮಂಡಲ ಎಂದರೆ ಕೆಎಂಎಫ್ ಮಹತ್ವದ ನಿರ್ಧಾರಕ್ಕೆ ಬಂದಿದೆ.

ಹಾಲು ಉತ್ಪಾದಕರಿಗೆ ನೀಡುತ್ತಿರುವ ಪ್ರೋತ್ಸಾಹಧನವನ್ನ ಈಗ ಪ್ರತಿ ಲೀಟರ್‌ಗೆ 5 ರೂಪಾಯಿಯಿಂದ 7 ರೂಪಾಯಿಗೆ ಹೆಚ್ಚಿಸಲು ಕರ್ನಾಟಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ

ರಾಜ್ಯದಲ್ಲಿ ಪ್ರತಿನಿತ್ಯ ಸುಮಾರು 1 ಕೋಟಿ ಲೀಟರ್ ಹಾಲು ಸಂಗ್ರಹ ಆಗುತ್ತದೆ. ರಾಜ್ಯದ ಮೂಲೆ ಮೂಲೆಯಲ್ಲಿ ಕೂಡ ಲಕ್ಷಾಂತರ ರೈತ ಕುಟುಂಬಗಳು ಹೈನುಗಾರಿಕೆ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಕೆಎಂಎಫ್ ಕರ್ನಾಟಕದ ರೈತರಿಗೆ ಅನುಕೂಲ ಮಾಡಿಕೊಡುವ ಕುರಿತು ಚರ್ಚೆ ಮಾಡಿ, ಪ್ರೋತ್ಸಾಹಧನ ಏರಿಸಲು ಇದೀಗ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ಬಸವಣ್ಣನ ಪುತ್ಥಳಿಗೆ ತರಾತುರಿ ಸರಿಯಲ್ಲ

ಸೂಕ್ತ ಸ್ಥಳ ಆಯ್ಕೆ ಅತ್ಯಗತ್ಯ: ಸಂತೋಷ್

• ಪ್ರಜೋದಯ ವರದಿ

ಅರಸೀಕೆರೆ: ಮಹಾ ಮಾನವತಾವಾದಿ ಜಗಜ್ಯೋತಿ ಬಸವೇಶ್ವರರ ಪುತ್ಥಳಿಯನ್ನು ನಗರದಲ್ಲಿ ಸ್ಥಾಪಿಸುವುದು ಸ್ವಾಗತಾರ್ಹ. ಆದರೆ ಬಸವಣ್ಣನವರ ಪುತ್ಥಳಿ ಸ್ಥಾಪಿಸಲು ಹೊರಟಿರುವವರು ಬಸವಣ್ಣನ ವಚನಗಳನ್ನ ಪಾಲಿಸುವ ಮನಸ್ಥಿತಿ ಹೊಂದಿದವರೇ ಎಂಬುದು ಸದ್ಯದ ಪ್ರಶ್ನೆಯಾಗಿದೆ ಎಂದು ಕಳೆದ ವಿಧಾನಸಭಾ ಚುನಾವಣೆಯ ಪರಾಜಿತ ಅಭ್ಯರ್ಥಿ ಹಾಗೂ ಜೆಡಿಎಸ್ ಮುಖಂಡ ಎನ್.ಆರ್.ಸಂತೋಷ್ ಅವರು ಹೇಳಿದರು.

ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಬಸವೇಶ್ವರರು ಒಂದು ಜಾತಿ, ಧರ್ಮಕ್ಕೆ ಸೀಮಿತವಾದವರಲ್ಲ ಅಂತಹ ಮಹಾನ್ ದಾರ್ಶನಿಕರ ಪ್ರತಿಮೆಯನ್ನು ನಗರದಲ್ಲಿ ಪ್ರತಿಷ್ಠಾಪಿಸುವ ಮೊದಲು ಪಕ್ಷಾತೀತ ಹಾಗೂ ಜಾತ್ಯತೀತವಾಗಿ ಒಂದು ಸಭೆ ನಡೆಸಿ ಸಭೆಯಲ್ಲಿ ಸೂಕ್ತ ಸ್ಥಳ ಆಯ್ಕೆ ಮಾಡಿಕೊಂಡು ಬಳಿಕ ಮುಂದಾದರೆ ಅದು ಅರ್ಥಪೂರ್ಣ ಎನಿಸುತ್ತದೆ. ಆದರೆ ಶಿವಲಿಂಗೇಗೌಡರು ತರಾತುರಿ ಯಲ್ಲಿ ಬಸವಣ್ಣನವರ ಪ್ರತಿಮೆ ಸ್ಥಾಪನೆಗೆ ಹೊರಟಿರುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು.

ನಗರ ಸೇರಿದಂತೆ ತಾಲೂಕಿನಲ್ಲಿ ಬಸವ ತತ್ವ ಅನುಯಾಯಿಗಳು ದೊಡ್ಡ ಪ್ರಮಾಣದಲ್ಲಿದ್ದಾರೆ ಅಲ್ಲದೆ ಬಸವೇಶ್ವರ ಪುತ್ಥಳಿ ತಾಲೂಕಿನಲ್ಲಿ ಎಲ್ಲೂ ಇಲ್ಲದೇ ಇರುವುದು ಅವರೆಲ್ಲರ ಅಸಮಾಧಾನಕ್ಕೂ ಕಾರಣವಾಗಿದೆ ಹಾಗಾಗಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸೂಕ್ತ ಸ್ಥಳದಲ್ಲಿ ಬಸವೇಶ್ವರ ಪ್ರತಿಮೆ ಸ್ಥಾಪಿಸಿದರೆ ಶಾಶ್ವತವಾಗಿರುತ್ತದೆ. ಈ ನಿಟ್ಟಿನಲ್ಲಿ ಇನ್ನು ಕಾಲ ಮಿಂಚಿಲ್ಲ ಶಾಸಕ ಶಿವಲಿಂಗೇಗೌಡರು ಗಮನ ಹರಸಲಿ ಎಂದು ಸಲಹೆ ನೀಡಿದರು.

ಬಸವೇಶ್ವರ ಪುತ್ಥಳಿ ಪ್ರತಿಷ್ಠಾಪನೆಗೆ ನಾನು ಸಹ ವೈಯಕ್ತಿಕವಾಗಿ ತನು ಮನ ಧನ ಸಮರ್ಪಣೆ ಮಾಡಲು ಸಿದ್ದನಿದ್ದು ಅಷ್ಟೇ ಅಲ್ಲದೆ ತಾಲೂಕಿನ ಜನತೆಯ ಹಿತದೃಷ್ಟಿ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ನಮ್ಮ ಸಹಕಾರವು ಇದ್ದೇ ಇರುತ್ತದೆ ಎಂದು ಪ್ರತಿಕ್ರಿಸಿದರು.

ಸೀಮಿತ ಅನುದಾನದಲ್ಲಿಯೇ ಅಗತ್ಯ ಪ್ರದೇಶಗಳಿಗೆ ಆದ್ಯತೆ

ಎತ್ತಿನಹೊಳೆ ಯೋಜನೆಯಡಿ ರಸ್ತೆ, ಮೂಲಸೌಕರ್ಯ ಅಭಿವೃದ್ಧಿ

• ಪ್ರಜೋದಯ ವರದಿ

ಸಕಲೇಶಪುರ: ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಸರ್ಕಾರದಿಂದ ಲಭ್ಯವಾಗುತ್ತಿರುವ ಸೀಮಿತ ಅನುದಾನದಲ್ಲಿಯೇ ಅಗತ್ಯ ಪ್ರದೇಶಗಳಿಗೆ ಆದ್ಯತೆ ನೀಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಎತ್ತಿನಹೊಳೆ ಯೋಜನೆಯಡಿ 1.80 ಕೋಟಿ ರೂ. ಅನುದಾನದಲ್ಲಿ ರಸ್ತೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿ, ತಾಲ್ಲೂಕಿನ ಹಲಸುಲಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಟಳ್ಳಿ ಗ್ರಾಮದಲ್ಲಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ನಿರ್ಮಾಣವಾಗಲಿರುವ ಕೊರಗಜ್ಜ ದೇವಾಲಯ ಸಂಪರ್ಕ ರಸ್ತೆ, ಗ್ರಾಮದಲ್ಲಿ ನಿರ್ಮಾಣವಾಗಲಿರುವ ಶ್ರೀ ಚೌಡೇಶ್ವರಿ ದೇವಿ ದೇವಾಲಯ ಕಾಮಗಾರಿ, ಬ್ಯಾಕರವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದಶಕಗಳ ಬೇಡಿಕೆಯಾಗಿದ್ದ ಹರಗರಹಳ್ಳಿ, ದೀನಹಳ್ಳಿ ಸಂಪರ್ಕ ರಸ್ತೆ ನಿರ್ಮಾಣ ಹಾಗೂ ವಳಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೊಮ್ಮನಮನೆ ಮುಖ್ಯ ರಸ್ತೆಯಿಂದ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದವರೆಗೆ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ ಎಂದರು.

ಹರಗರಹಳ್ಳಿ–ದೀನಹಳ್ಳಿ ಸಂಪರ್ಕ ರಸ್ತೆ ಕಾಮಗಾರಿಗೆ 85 ಲಕ್ಷ ರೂ. ಹಾಗೂ ಬೊಮ್ಮನಮನೆ ಮುಖ್ಯ ರಸ್ತೆ –ಮಲ್ಲಿಕಾರ್ಜುನ ಸ್ವಾಮಿ ದೇವಾಲಯ ರಸ್ತೆ ಕಾಮಗಾರಿಗೆ 95 ಲಕ್ಷ ರೂ. ಸೇರಿದಂತೆ ಒಟ್ಟು 1.80 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಸಂಚಾರಕ್ಕೆ ತೀವ್ರ ತೊಂದರೆಯಾಗಿದ್ದ ಗ್ರಾಮಗಳಿಗೆ ದಶಕಗಳ ನಂತರ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆಯಿಂದ ಗ್ರಾಮಸ್ಥರ ಬಹುಕಾಲದ ಬೇಡಿಕೆ ಇದೀಗ ಈಡೇರುತ್ತಿರುವುದು ಸಂತಸದ ವಿಷಯವಾಗಿದೆ ಎಂದು ಹೇಳಿದರು.

ಕ್ಷೇತ್ರಕ್ಕೆ ಮೀಸಲಿದ್ದ ಮಳೆ ಪರಿಹಾರ ಅನುದಾನವನ್ನು ಬೇರೆ ಜಿಲ್ಲೆಗೆ ವರ್ಗಾವಣೆ ಮಾಡಿರುವುದರಿಂದ ಕ್ಷೇತ್ರಕ್ಕೆ ಅನ್ಯಾಯವಾಗಿದೆ ಎಂದು ಆರೋಪಿಸಿದ ಅವರು, ಮುಂದಿನ ದಿನಗಳಲ್ಲಿ ಕ್ಷೇತ್ರಕ್ಕೆ ಮೀಸಲಿರುವ ಅನುದಾನವನ್ನು ಹೆಚ್ಚಿಸುವುದರ ಜೊತೆಗೆ ವರ್ಗಾವಣೆಗೊಂಡ ಅನುದಾನವನ್ನು ಹಿಂತಿರುಗಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಗ್ರಾಪಂ ಮಾಜಿ ಅಧ್ಯಕ್ಷ ರೋಷನ್, ರೇಣುಕ್, ಪುಟ್ಟಣ್ಣ, ಇಂದ್ರಶೇಖರ್, ಸೋಮಯ್ಯ, ಪಾಲಾಕ್ಷ, ವಕೀಲರ ಸಂಘದ ಅಧ್ಯಕ್ಷ ಯಶ್ವಂತ, ಪತ್ರಕರ್ತರಾದ ಕುಶ್ವಂತ್, ಚೇತನ ಹರಗಹಳ್ಳಿ ಬಿಜೆಪಿ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಮಾನಸಿಕ ಮಾಲಿನ್ಯ ಭೌತಿಕ ಪರಿಸರ ಮಾಲಿನ್ಯಕ್ಕಿಂತಲೂ ಮಾರಕ

• ಪ್ರಜೋದಯ ವರದಿ

ಹೊಳೆನರಸೀಪುರ: ಸಾಮಾಜಿಕ ಮಾಧ್ಯಮಗಳ ಪರಿಣಾಮದಿಂದಾಗಿ, ಇತ್ತೀಚಿಗೆ ಯುವಕರು ಮಾನಸಿಕವಾಗಿ ಮಲಿನಗೊಳ್ಳುತ್ತಿದ್ದಾರೆ. ಮಾನಸಿಕ ಮಾಲಿನ್ಯ ಭೌತಿಕ ಪರಿಸರ ಮಾಲಿನ್ಯಕ್ಕಿಂತಲೂ ಅತ್ಯಂತ ಮಾರಕವಾದುದು ಎಂದು ದೊಡ್ಡಕಾಡನೂರು ಜೆಎಸ್‌ಎಸ್ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ. ಚೌಡಯ್ಯ ಕಟ್ನವಾಡಿ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಸಂಕನಹಳ್ಳಿ ಗ್ರಾಮದಲ್ಲಿ ಮಹಿಳಾ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನವರು ಏರ್ಪಡಿಸಿದ್ದ 2025–26ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದಲ್ಲಿ ‘ಪರಿಸರ ಸಂರಕ್ಷಣೆಯಲ್ಲಿ ಯುವ ಜನತೆಯ ಪಾತ್ರ’ ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ಮನುಷ್ಯ ಇಂದು ಪ್ರಪಂಚದಲ್ಲಿ ಎರಡು ರೀತಿಯಲ್ಲಿ ಪರಿಸರ ಮಾಲಿನ್ಯ ಮಾಡುತ್ತಿದ್ದಾನೆ. ಒಂದು ಪ್ರಕೃತಿಯನ್ನು ಹಾಳುಮಾಡುವುದು, ಅಂದರೆ, ಗಿಡ ಮರಗಳನ್ನು ದುರಾಸೆಯಿಂದ ಕಡಿಯುವುದು, ಕಾಡನ್ನು ಕಡಿದು ಕಾಂಕ್ರಿಟ್ ನಾಡಾಗಿ ಪರಿವರ್ತಿಸುವುದು. ಹೆಚ್ಚು ಇಳುವರಿ ಬರಲಿ ಎಂಬ ಕಾರಣಕ್ಕೆ ಹೊಲ- ಗದ್ದೆಗಳಿಗೆ ವಿಪರೀತ ರಸಗೊಬ್ಬರ, ಕ್ರಿಮಿಕೀಟ ನಾಶಕಗಳನ್ನು ಬಳಸುತ್ತಿದ್ದಾನೆ. ಇದು ಭೌತಿಕ ಪರಿಸರವನ್ನು ಹಾಳು ಮಾಡುತ್ತಿದೆ. ಇದರಿಂದಲೂ ಅನೇಕ ರೋಗಗಳು ಬರುತ್ತಿವೆ. ಆದ್ದರಿಂದ ಮನುಷ್ಯ ಅತಿ ಆಸೆಯಿಂದ ದೂರವಿರಬೇಕು ಎಂದು ತಿಳಿಸಿದರು.

ಮತ್ತೊಂದು ಮನಸ್ಸಿನ ಮಾಲಿನ್ಯ, ಇದು ಭೌತಿಕ ಪರಿಸರ ಮಾಲಿನ್ಯಕ್ಕಿಂತಲೂ ಅತ್ಯಂದ ಕೆಟ್ಟದಾಗಿದೆ ಮತ್ತು ನಾಡಿನ ಅಮಾಯಕ ಜನರ ಮೇಲೆ ಅನೇಕ ಮಾರಣಾಂತಿಕ ಪರಿಣಾಮಗಳನ್ನು ಬೀರುತ್ತದೆ. ಮಲಿನವಾದ ಮನಸ್ಸುಗಳು ಯಾರಿಗೂ ಒಳ್ಳೆಯದನ್ನು ಮಾಡುವುದಿಲ್ಲ. ಮಲಿನ ಮನಸ್ಸು ಮೊದಲು ತಮ್ಮ ಮಾನಸಿಕ ಶಾಂತಿಯನ್ನು ಕೆಡಿಸುತ್ತವೆ. ಸ್ವಂತ ಕುಟುಂಬ ಮತ್ತು ಸಂಸಾರವನ್ನು ಹಾಳು ಮಾಡುತ್ತವೆ. ನಂತರ ನಮ್ಮ ಸುತ್ತಮುತ್ತಲಿನ ಜನರಿಗೂ ತೊಂದರೆಯನ್ನು ಉಂಟು ಮಾಡುತ್ತವೆ ಎಂದರು.

ಮಲಿನಗೊಂಡ ಮನಸ್ಸನ್ನು ಹೊಂದಿರುವ ಜನರು ಅವರ ಬಗ್ಗೆಯಾಗಲಿ, ಅವರ ಸ್ವಂತ ಸಂಬಂಧಿಕರ ಬಗ್ಗೆಯಾಗಲಿ, ಸಮಾಜದ ಬಗ್ಗೆಯಾಗಲಿ, ಒಳ್ಳೆಯದನ್ನು ಬಯಸುವುದಿಲ್ಲ. ಅವರ ಮನಸ್ಸು ಯಾವಾಗಲೂ ಕೆಟ್ಟದನ್ನೇ ಬಯಸುತ್ತದೆ. ಇವರು ಖಿನ್ನತೆಗೆ ಒಳಗಾಗುತ್ತಾರೆ. ಅನೇಕ ಮಾನಸಿಕ ತೊಂದರೆಗಳಿಗೆ ಸಿಲುಕಿಕೊಳ್ಳುತ್ತಾರೆ. ನೋಡುವುದಕ್ಕೆ ಒಳ್ಳೆಯವರಂತೆ ಕಂಡರೂ, ಅವರ ಆಲೋಚನೆಗಳೂ ಕೆಟ್ಟದಾಗಿರುತ್ತವೆ. ಆದ್ದರಿಂದ ಯುವಜನರು ಭೌತಿಕ ಮತ್ತು ಸಾಂಸ್ಕೃತಿಕ ಪರಿಸವನ್ನು ಹಾಳು ಮಾಡಬಾರದು. ದೈಹಿಕ ಮತ್ತು ಮಾನಸಿಕವಾಗಿ ಶುದ್ಧತೆಯನ್ನು ಕಾಪಾಡಿಕೊಳ್ಳಬೇಕು. ಪರಿಶುದ್ಧವಾದ ಮನಸ್ಸು ಸದಾ ಪ್ರಶಾಂತವಾದ ಶಾಂತಿ, ಪ್ರೀತಿ, ಕರುಣೆ ಮತ್ತು ಮೈತ್ರಿಯನ್ನು ಹೊಂದಿರುತ್ತದೆ. ಅಮಾಜಕ್ಕೆ ಸದಾ ಒಳ್ಳೆಯದನ್ನೆ ಬಯಸುತ್ತದೆ ಎಂದು ಅವರು ಸಲಹೆ ನೀಡಿದರು.

ಸಾಹಿತಿ ಎನ್ ಆರ್ ಶಿವರಾಂ, ಹೊಳೆನರಸೀಪುರದ ಪ್ರಥಮ ದರ್ಜೆ ಗುತ್ತಿಗೆದಾರ ಮಾಯಣ್ಣ, ಮಹಿಳಾ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಉಪನ್ಯಾಸಕರಾದ ಸಂತೋಷ್, ನಯನ, ಮಮತ, ಗುರುಪ್ರಾಸಾದ್, ನಟೇಶ್, ಸಾಮಾಜಿಕ ಕಾರ್ಯಕರ್ತೆ ಕುಸುಮ ಹಾಗೂ ಸಂಕನಹಳ್ಳಿ ಗ್ರಾಮದ ಮುಖಂಡರು ಮತ್ತು ಸಾರ್ವಜನಿಕರು, ಶಿಬಿರಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಠಮಾನ್ಯಗಳಿಂದಲೇ ಸನಾತನ ಧರ್ಮ ಜೀವಂತ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಸನಾತನ ಹಿಂದೂ ಧರ್ಮ ದೇಶದಲ್ಲಿ ಉಳಿದಿದೆ ಎಂದರೆ ಕೇವಲ ಮಠಮಾನ್ಯಗಳಿಂದ ಮಾತ್ರ ಎಂದು ಬಿಜೆಪಿ ಮುಖಂಡ ಸಿ. ಆರ್. ಚಿದಾನಂದ್ ಅವರು ತಿಳಿಸಿದರು.

ಅವರು ತಾಲೂಕಿನ ಹೊಸಕೊಪ್ಪಲು ಗ್ರಾಮದ ಚೌಡೇಶ್ವರಿ ಶಕ್ತಿಮಠದಲ್ಲಿ ಶ್ರೀ ಬಸವೇಶ್ವರ ಚೈತನ್ಯ ಮಹಾಸ್ವಾಮೀಜಿಗಳ ಹುಟ್ಟು ಹಬ್ಬದ ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಹಿಂದೂ ಧರ್ಮ ದೇಶದಲ್ಲಿ ಬಲಿಷ್ಠವಾಗಿ ಬೇರೂರಲು ದೇವಸ್ಥಾನಗಳು ಮಠಮಾನ್ಯಗಳು ಕಾರಣವಾಗಿದೆ. ಜನರಲ್ಲಿ ಶಾಂತಿ ನೆಮ್ಮದಿ ಸಂಸ್ಕೃತಿಯನ್ನ ತಿಳಿಸಲು ಪ್ರಮುಖ ಪಾತ್ರ ವಹಿಸುವ ಕೇಂದ್ರಗಳಾಗಿದ್ದು, ಅವುಗಳನ್ನು ಪೋಷಿಸಿ ಬೆಳೆಸುವುದು ಎಲ್ಲಾ ಹಿಂದೂ ಬಾಂಧವರ ಕರ್ತವ್ಯವಾಗಿದೆ. ತಾಲೂಕಿನಲ್ಲಿ ಉತ್ತಮವಾದ ಸುಸಂಸ್ಕೃತವಾದ ಶಕ್ತಿಯುತವಾದ ಮಠವನ್ನು ಕಟ್ಟಿದ ಚೈತನ್ಯ ಸ್ವಾಮೀಜಿಗಳ ಹುಟ್ಟು ಹಬ್ಬದಂದು ಭಾಗವಹಿಸಿರುವುದು ನಮ್ಮೆಲ್ಲರ ಪುಣ್ಯವಾಗಿದೆ ಇದೆ ರೀತಿ ಉತ್ತಮ ಸಮಾಜಮುಖಿ ಕೆಲಸಗಳನ್ನು ಮಾಡಿಕೊಂಡು ಹೆಚ್ಚು ಜನಪ್ರಿಯತೆ ಗಳಿಸಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ ಎಂದರು.

ಇದೇ ಸಂದರ್ಭದಲ್ಲಿ ದೇವರಿಗೆ ವಿಶೇಷ ಪೂಜೆ, ಮಹಾ ಚಂಡಿ ಹೋಮ, ಆಯುಷ್ಯ ಹೋಮ, ದೇವರಿಗೆ ವಿಶೇಷ ಅಲಂಕಾರದೊಂದಿಗೆ ಭಕ್ತರಿಂದ ಶ್ರೀಗಳ ಪಾದ ಪೂಜೆ ಜರುಗಿತು, ನಂತರ ಪ್ರಸಾದ ವಿನಿಯೋಗ ಏರ್ಪಡಿಸಲಾಗಿತ್ತು.

ಮಾಜಿ ವಿಧಾನ ಪರಿಷತ್ ಸದಸ್ಯ ಎಂ.ಎ. ಗೋಪಾಲಸ್ವಾಮಿ, ರಾಜ್ಯ ಕೆಪಿಸಿಸಿ ವಕ್ತಾರ ಮಂಜೇಶ್, ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಮೀಸೆ ಮಂಜಣ್ಣ, ಮಂಜು ಗುಂಡಶೆಟ್ಟಿಹಳ್ಳಿ, ಕೆರೆ ಬೀದಿ ಜಗದೀಶ್ ಮತ್ತಿತರಿದ್ದರು.

ಧರ್ಮಸ್ಥಳ ಯೋಜನೆಯಿಂದ ಲಕ್ಷಾಂತರ ಕುಟುಂಬಗಳು ಸಬಲ

ಧಾರ್ಮಿಕ ಸಭೆಯಲ್ಲಿ ಶಾಸಕ ಸಿಮೆಂಟ್ ಮಂಜು

• ಪ್ರಜೋದಯ ವರದಿ

ಆಲೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ರಾಜ್ಯದ್ಯಂತ ಲಕ್ಷಾಂತರ ಕುಟುಂಬಗಳು ಆರ್ಥಿಕವಾಗಿ ಸಬಲವಾಗಿವೆ ಎಂದು ಶಾಸಕ ಸಿಮೆಂಟ್ ಮಂಜು ಅವರು ತಿಳಿಸಿದರು.

ತಾಲ್ಲೂಕಿನ ಮಗ್ಗೆ ವಲಯದ ರಾಯರ ಕೊಪ್ಪಲು ಸಮುದಾಯ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್ ರಿ., ವಲಯ ಮಟ್ಟದ ಸಾಮೂಹಿಕ ಶ್ರೀ ಲಕ್ಷ್ಮಿಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪೂಜ್ಯ ಧರ್ಮಾಧಿಕಾರಿಗಳು ನಡೆಸುವ ಸಮಾಜಸೇವಾ ಕಾರ್ಯಗಳನ್ನು ಜನರು ಸದುಪಯೋಗಪಡಿಸಿಕೊಳ್ಳಬೇಕು. ಮಹಿಳಾ ಸಬಲೀಕರಣ ದೊಡ್ಡ ಶಕ್ತಿಯಾಗಿ ಬೆಳೆದು ನಿಂತಿದೆ ಎಂದರು.



ಸಾಮೂಹಿಕ ಶ್ರೀ ಲಕ್ಷ್ಮಿ ಪೂಜೆ ಸಮಿತಿ ಅಧ್ಯಕ್ಷ ಪಿ.ಜೆ.ಚಂದ್ರಶೇಖರ್, ಯೋಜನೆಯಿಂದ ಕುಟುಂಬಗಳು ಆರ್ಥಿಕಾಗಿ ಸಬಲರಾಗುವುದಲ್ಲದೆ, ಕುಟುಂಬಗಳ ನಡುವೆ ಪರಸ್ಪರ ವಿಶ್ವಾಸ ಬೆಳೆಯುತ್ತದೆ. ಪ್ರಾಮಾಣಿಕತೆ ವೃದ್ಧಿಯಾಗುತ್ತದೆ ಎಂದು ಹೇಳಿದರು.

ಧಾರ್ಮಿಕ ಉಪನ್ಯಾಸಕರಾಗಿ ರಾಯರ ಕೊಪ್ಪಲು ಕೆಪಿಎಸ್ ಪ್ರೌಢಶಾಲೆ ಪ್ರಾಂಶುಪಾಲೆ ಶೀಲಾ ಅವರು ಮಾತನಾಡಿ, ಶ್ರೀ ಕ್ಷೇತ್ರದ ವತಿಯಿಂದ ನಡೆಯುವಂತ ಸಮಾಜ ಸೇವೆ ಕಾರ್ಯಗಳು ಸಮಾಜಕ್ಕೆ ಬಹಳಷ್ಟು ಅನುಕೂಲಕರವಾಗಿದೆ. ಸಾರ್ವಜನಿಕರು ಸಂಸ್ಕಾರವಂತರಾಗಬೇಕು ಎಂದು ಅವರು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಆಲೂರು ತಾಲೂಕು ಕ್ಷೇತ್ರ ಯೋಜನಾಧಿಕಾರಿ ಕೆ.ರತ್ನಾಕರ ಕೊಠಾರಿ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಮುಖೇನ ನಡೆಸಲ್ಪಡುವ ಸ್ವಸಹಾಯ ಸಂಘದ ಸದಸ್ಯರು ಆರ್ಥಿಕವಾಗಿ ಸಬಲರಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕುಂದೂರು ಗ್ರಾ. ಪಂ. ಮಾಜಿ ಅಧ್ಯಕ್ಷೆ ಶೈಲಜಾ, ಒಕ್ಕೂಟದ ಅಧ್ಯಕ್ಷರು, ಪದಾಧಿಕಾರಿಗಳು, ವಲಯದ ಸೇವಾಪ್ರತಿನಿಧಿಗಳು, ಪ್ರಗತಿಬಂದು ಸ್ವಸಹಾಯ ಸಂಘದ ಸದಸ್ಯರು, ವಲಯದ ಮೇಲ್ವಿಚಾರಕ ಗೋವಿಂದಪ್ಪ ಸೇರಿ ಇನ್ನಿತರರು ಉಪಸ್ಥಿತರಿದ್ದರು.

ಶಾಸಕ ಹೆಚ್.ಕೆ.ಸುರೇಶ್‌ರಿಂದ ಪ್ರೋಟೋಕಾಲ್ ಉಲ್ಲಂಘನೆ

ಶಾಸಕರ ಕಾರ್ಯವೈಖರಿ ವಿರುದ್ಧ ಎಂ.ಆರ್.ವೆಂಕಟೇಶ್ ಆಕ್ರೋಶ

• ಪ್ರಜೋದಯ ವರದಿ

ಬೇಲೂರು: ಪುರಸಭೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ವಿವಿಧ ಕಾಮಗಾರಿಗಳ ಗುದ್ದಲಿ ಪೂಜೆ ಹಾಗೂ ಉದ್ಘಾಟನಾ ಕಾರ್ಯಕ್ರಮಗಳನ್ನು ಪ್ರೋಟೋಕಾಲ್ ಉಲ್ಲಂಘಿಸಿ ನಡೆಸಲಾಗುತ್ತಿದೆ ಎಂದು ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ಎಂ. ಆರ್.ವೆಂಕಟೇಶ್ ಅವರು ಶಾಸಕ ಎಚ್.ಕೆ.ಸುರೇಶ್ ಅವರ ಕಾರ್ಯವೈಖರಿ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರದ ಅನುದಾನದಲ್ಲಿ ನಡೆಯುವ ಯಾವುದೇ ಕಾಮಗಾರಿಗೂ ನಿಗದಿತ ನಿಯಮಾವಳಿ ಇದೆ. ಶಿಲಾನ್ಯಾಸ, ಉದ್ಘಾಟನೆ ಸೇರಿದಂತೆ ಎಲ್ಲ ಸರ್ಕಾರಿ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಮಂತ್ರಿಗಳು, ಉಸ್ತುವಾರಿ ಅಧಿಕಾರಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳನ್ನು ಆಹ್ವಾನಿಸಿ ಪ್ರೋಟೋಕಾಲ್ ಪ್ರಕಾರ ನಡೆಸಬೇಕು. ಆದರೆ, ಇಲ್ಲಿ ಶಾಸಕರು ತಮ್ಮ ಇಚ್ಛೆಯಂತೆ ಫ್ಲೆಕ್ಸ್‌ಗಳನ್ನು ಹಾಕಿಸಿ, ಮುಖ್ಯರಸ್ತೆಗಳನ್ನು ಅಡ್ಡಗಟ್ಟಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಇದು ಕಾನೂನು ಮತ್ತು ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸುವ ಕ್ರಮವಾಗಿದೆ ಎಂದು ಟೀಕಿಸಿದರು.

ಒಂದೇ ಯೋಜನೆಗೆ ಹಲವು ಬಾರಿ ಗುದ್ದಲಿ ಪೂಜೆ ನಡೆಸುತ್ತಿರುವುದು ಜನರಲ್ಲಿ ಗೊಂದಲ ಸೃಷ್ಟಿಸುತ್ತದೆ ಎಂದು ಅವರು ಹೇಳಿದರು. ಸರ್ಕಾರದ ಯೋಜನೆಗಳನ್ನು ವೈಯಕ್ತಿಕ ಪ್ರಚಾರದ ವೇದಿಕೆಯಾಗಿಸಿಕೊಳ್ಳಬಾರದು. ಕಾಂಗ್ರೆಸ್ ಸರ್ಕಾರದ ಅನುದಾನ, ನಮ್ಮ ಅನುದಾನ ಯೋಜನೆ ಎಂದು ಹೇಳಿಕೊಳ್ಳುವುದು ಸರಿಯಲ್ಲ. ಇದು ಸಾರ್ವಜನಿಕರ ಹಣದಿಂದ ನಡೆಯುವ ಯೋಜನೆ. ಜನರ ತೆರಿಗೆ ಹಣದಿಂದ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ ಎಂಬ ಅರಿವು ಇರಬೇಕು ಎಂದರು.

ಕಾಮಗಾರಿಗಳ ಗುಣಮಟ್ಟದ ಬಗ್ಗೆ ಗಂಭೀರ ಪ್ರಶ್ನೆ ಎತ್ತಿದ ಅವರು, ಕೆಲವು ಕಾಮಗಾರಿಗಳು ಕಳಪೆ ಮಟ್ಟದಲ್ಲಿ ನಡೆಯುತ್ತಿವೆ ಎಂಬ ಸಾರ್ವಜನಿಕ ದೂರುಗಳಿವೆ ಎಂದು ತಿಳಿಸಿದರಲ್ಲದೆ, ಭ್ರಷ್ಟಾಚಾರವನ್ನು ನಿಲ್ಲಿಸುತ್ತೇನೆ ಎಂದು ಹೇಳುವವರು, ಕಳಪೆ ಕಾಮಗಾರಿಗಳಿಗೆ ಮೌನ ಅನುಮತಿ ನೀಡುವುದೇನು? ಗುತ್ತಿಗೆದಾರರ ಪರವಾಗಿ ನಿಂತು ಜನರ ಹಿತವನ್ನು ಕಡೆಗಣಿಸುವುದು ಒಪ್ಪಲಾರದ ವಿಚಾರ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರಿ ಕಾರ್ಯಕ್ರಮಗಳಲ್ಲಿ ಉಸ್ತುವಾರಿ ಮಂತ್ರಿಗಳ ಹೆಸರುಗಳನ್ನು ಪ್ರೋಟೋಕಾಲ್ ಪ್ರಕಾರ ಉಲ್ಲೇಖಿಸಬೇಕು. ಆದರೆ ಸಂಬಂಧಿಸಿದ ಅಧಿಕಾರಿಗಳು ಹಾಜರಿರದಿದ್ದರೂ ಅವರ ಹೆಸರುಗಳನ್ನು ಪ್ರೋಟೋಕಾಲ್ ಪ್ರಕಾರ ಪ್ರಸ್ತಾಪಿಸಬೇಕಿತ್ತು; ಅದನ್ನು ಶಾಸಕರು ಪಾಲಿಸಿಲ್ಲ ಎಂದು ದೂರಿದರಲ್ಲದೆ, ಸರ್ಕಾರದ ನಿಯಮಾವಳಿಗಳನ್ನು ತೂರಿಹಾಕುವ ಧೋರಣೆ ಸರಿಯಲ್ಲ; ಮೊದಲು ಶಾಸಕರು ತಮ್ಮ ನಡೆ–ನುಡಿಗಳನ್ನು ತಿದ್ದಿಕೊಳ್ಳಬೇಕು ಎಂದು ಆಗ್ರಹಿಸಿದರು.

ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸಚಿವ ಬಿ.ಶಿವರಾಮ್ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿರುವುದಾಗಿ ತಿಳಿಸಿದರಲ್ಲದೆ, ಸರ್ಕಾರದ ಹಣ ವ್ಯಯವಾಗುತ್ತಿರುವ ಹಿನ್ನೆಲೆಯಲ್ಲಿ ಸಮಗ್ರ ತನಿಖೆ ನಡೆಸಿ, ದೋಷಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ವಿಜಯನಗರದ ಬಸವ ಭವನದಲ್ಲಿ ನಡೆದ 20ನೇ ಓಪನ್ ಕರಾಟೆ ಚಾಂಪಿಯನ್‌ಶಿಪ್

ಹಾಸನದ 30 ಕರಾಟೆ ವಿದ್ಯಾರ್ಥಿಗಳಿಗೆ ಪ್ರಶಸ್ತಿ

• ಪ್ರಜೋದಯ ವರದಿ

ಹಾಸನ: ಮೈಸೂರು ಜಿಲ್ಲೆ ವಿಜಯನಗರದ ಬಸವ ಭವನದಲ್ಲಿ ಇತ್ತೀಚೆಗೆ ನಡೆದ 20ನೇ ಓಪನ್ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಹಾಸನ ಜಿಲ್ಲೆಯ ನ್ಯಾಷನಲ್ ಶೋಟೋಕನ್ ಕರಾಟೆ ಮಲ್ಟಿಪರ್ಪಸ್ ಫೆಡರೇಶನ್ ಶಾಲೆಯ 30 ಜನ ವಿದ್ಯಾರ್ಥಿಗಳು ಭಾಗವಹಿಸಿ ಕಥಾ ಮತ್ತು ಕುಮಿತೆ ವಿಭಾಗದಲ್ಲಿ ಸ್ಪರ್ಧಿಸಿ ಪ್ರಥಮ ದ್ವಿತೀಯ ಹಾಗೂ ತೃತೀಯ ಬಹುಮಾನಗಳ ವಿಜೇತರಾಗಿದ್ದು ಹಾಸನ ತಂಡವು ಉತ್ತಮ ಪ್ರದರ್ಶನವನ್ನು ನೀಡುವುದರ ಮೂಲಕ ರನ್ನರ್ ಅಪ್ ಪಟ್ಟವನ್ನು ಮುಡಿಗೇರಿಸಿಕೊಂಡಿದೆ.



ಕಥಾ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಸಾನ್ವಿ ಎಸ್ ಹೇಮಶ್ರೀ ಸಿ.ಡಿ., ಧ್ರುವ, ಶ್ರೇಯಸ್ ವಿ., ಸಿಂಚನ ಜೆ.ಎಸ್., ಸಮೃದ್ಧ ಟಿ.ಎಂ., ಯುಕ್ತಿ ಎಚ್.ಎನ್., ಮದನ್‌ಗೌಡ ಡಿ.ಆರ್., ಪುನೀತ್‌ಗೌಡ ಪ್ರಥಮ ಸ್ಥಾನವನ್ನು ಪಡೆದರೆ, ದ್ವಿತೀಯ ಸ್ಥಾನವನ್ನು ಷಷ್ಠಿ ಟಿ.ಎಂ., ಯಂತ್ ಗೌಡ, ಮುರಳಿ ಎಚ್.ಎಸ್, ಮಿಥುನ್‌ಗೌಡ ಬಿ.ಎಂ., ಕಿರಣ್ ಎಚ್.ಎನ್., ದೀಕ್ಷಿತ್ ಎಚ್.ಎಸ್, ಹರ್ಷಗೌಡ ಎಂ, ಲಕ್ಷಿತ್ ಜೆ ಶೆಟ್ಟಿ, ಮೋಕ್ಷಿತ ಎಚ್.ಎಸ್, ಜೀವನ್ ಸಿ.ಕೆ., ರೋನಕ್, ದ್ವಿತೀಯ ಸ್ಥಾನವನ್ನು ಪಡೆದರೆ ತೃತೀಯ ಸ್ಥಾನವನ್ನು ಮಾಯಾಂಕ್ ಟಿ, ನಕುಲ್ ಗೌಡ, ನೂತನ್ ಗೌಡ ಎ.ಆರ್., ಜೀವನ್ ಎಚ್.ಸಿ., ಗೌತಮ್‌ಗೌಡ ಜಿ.ವಿ., ಚೇತನ್ ಹೆಚ್.ಬಿ, ತನ್ವಿ ಎಂ.ಗೌಡ, ಪ್ರೀತಮ್‌ಗೌಡ ಇವರುಗಳು ತೃತೀಯ ಸ್ಥಾನವನ್ನು ಪಡೆದಿದ್ದಾರೆ.

ಕುಮಿತೆ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಸಿಂಚನ ಜೆ.ಎಸ್., ಜೀವನ್ ಸಿ.ಕೆ., ಮತ್ತು ದ್ವಿತೀಯ ಸ್ಥಾನದಲ್ಲಿ ಮಿಥುನ್‌ಗೌಡ, ದೀಕ್ಷಿತ್ ಎಚ್.ಎಸ್., ಲಕ್ಷಿತ್ ಜೆ.ಶೆಟ್ಟಿ, ಮೋಕ್ಷಿತ ಎಚ್.ಎಸ್., ತನ್ವಿ ಎಂ. ಗೌಡ, ಸಾನ್ವಿ ಎಸ್., ಪ್ರೀತಮ್ ಗೌಡ ಹಾಗೂ ತೃತೀಯ ಸ್ಥಾನದಲ್ಲಿ ಮಾಯಾಂಕ್ ಟಿ., ನೂತನ್‌ಗೌಡ ಎ.ಆರ್., ಹೇಮಾಶ್ರೀ ಸಿ.ಡಿ, ಯುಕ್ತಿ ಎಚ್.ಎನ್., ಜೀವನ್ ಎಚ್.ಸಿ. ಪಡೆದಿದ್ದಾರೆ.

ಅವರ ಶಿಸ್ತಿನ ತರಬೇತಿ, ಪರಿಶ್ರಮ ಮತ್ತು ಆತ್ಮವಿಶ್ವಾಸದ ಫಲವಾಗಿ ಈ ಮಹತ್ವದ ಸಾಧನೆ ಸಾಧ್ಯವಾಗಿದೆ ಹಾಗೂ ಕರಾಟೆ ಶಿಕ್ಷಕರಾದ ಸೆನ್ಸೈ ಸುಮಂತ್ ಹೆಚ್.ಸಿ ಮತ್ತು ಸೆನ್ಸೈ ವಿಶ್ವಂತ್ ಹೆಚ್.ಸಿ. ಅವರು ಮಕ್ಕಳಿಗೆ ಹೆಚ್ಚಿನ ಶ್ರಮ ವಹಿಸಿ ಈ ಪಂದ್ಯಾವಳಿಗೆ ತಯಾರಿ ಮಾಡಿದ್ದು ಮಕ್ಕಳ ಯಶಸ್ಸಿಗೆ ಪಾತ್ರರಾಗಿದ್ದು ಶಾಲಾ ಆಡಳಿತ ಮಂಡಳಿ ಹಾಗೂ ಶಿಕ್ಷಕ ವರ್ಗದವರು ಮತ್ತು ಪೋಷಕರು ಮಕ್ಕಳಿಗೆ ಅಭಿನಂದನೆ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆ ಹಾಸನ ಜಿಲ್ಲೆಯಷ್ಟೇ ಅಲ್ಲದೆ ರಾಜ್ಯಮಟ್ಟದಲ್ಲಿಯೂ ಹೆಮ್ಮೆ ಮೂಡಿಸಿದ್ದು, ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಉತ್ತಮ ಸಾಧನೆ ಮಾಡುವ ವಿಶ್ವಾಸವನ್ನು ತರಬೇತುದಾರರು ವ್ಯಕ್ತಪಡಿಸಿದ್ದಾರೆ.

‘ಅನ್ನಸುವಿಧಾ’ ವಿಳಂಬವಾದರೆ ಶಿಸ್ತು ಕ್ರಮ

ಅರ್ಹ ಫಲಾನುಭವಿಗಳ ಮನೆ ಬಾಗಿಲಿಗೆ ಪಡಿತರ ಆಹಾರ ನೀಡಲು ಸೂಚನೆ

• ಪ್ರಜೋದಯ ವರದಿ

ಹಾಸನ: 75 ವಯಸ್ಸಿನ ಮೇಲ್ಪಟ್ಟ ಒಂಟಿ ಹಿರಿಯ ನಾಗರೀಕರು ಇರುವ ಮನೆಗಳಿಗೆ ಅನ್ನಸುವಿಧಾ ಯೋಜನೆ ಮೂಲಕ ಅರ್ಹ ಫಲಾನುಭವಿಗಳ ಮನೆ ಬಾಗಿಲಿಗೆ ಪಡಿತರ ಆಹಾರ ನೀಡಬೇಕು, ವಿಳಂಬವಾದರೆ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಸೂಚನೆ ನೀಡಿದರು.

ವಿಡಿಯೋ ಸಂವಾದದ ಮೂಲಕ ಇಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು ಫೆ 13 ರಂದು ಜಿಲ್ಲೆಗೆ ಭೇಟಿ ನೀಡಿ ಸಭೆಯಲ್ಲಿ ನೀಡಿದ ನಿರ್ದೇಶನದ ಕುರಿತು ಕೈಗೊಂಡ ಕ್ರಮದ ಸಂಬಂಧ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು.



ಸಚಿವರ ನಿರ್ದೇಶನದಂತೆ ಈಗಾಗಲೇ ಬಿಪಿಎಲ್‌ನಿಂದ ಎಪಿಎಲ್‌ಗೆ ಪರಿವರ್ತಿಸಿದ್ದರೆ ಅಗತ್ಯ ದಾಖಲೆಗಳನ್ನು ಪಡೆದು ಬಿಪಿಎಲ್ ಕಾರ್ಡ್ ನೀಡಲು ಮರು ಪರಿಶೀಲನೆ ಮಾಡುವಂತೆ ತಿಳಿಸಿದರು.

ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿ ವೇಳೆಯಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಮುದಾಯದ ಸಂಘ ಸಂಸ್ಥೆಗಳಿಗೆ/ಸಮುದಾಯದ ಖಾಸಗಿ ವ್ಯಕ್ತಿಗಳಿಗೆ ಮೀಸಲಾತಿಯನ್ನು ಅನುಸರಿಸಿ ಹೊಸ ನ್ಯಾಯಬೆಲೆ ಅಂಗಡಿ ಮಂಜೂರಾತಿಗೆ ಕ್ರಮ ವಹಿಸುವಂತೆ ಸೂಚಿಸಿದರು

ಜಿಲ್ಲೆಯಲ್ಲಿರುವ ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ ಕಡ್ಡಾಯವಾಗಿ ವೇಳಾಪಟ್ಟಿಯನ್ನು ಅಳವಡಿಸಿರಬೇಕು ವೇಳಾಪಟ್ಟಿ ಅಳವಡಿಸದಿರುವ ನ್ಯಾಯಬೆಲೆಗಳ ವಿವರವನ್ನು ಕೂಡಲೇ ಸಲ್ಲಿಸುವಂತೆ ತಿಳಿಸಿದರು.

ತೂಕ ಅಳತೆಯ ಪರಿಶೀಲನೆಯಾಗಬೇಕು ನಿಗದಿತ ಗುರಿಯನ್ನು ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸ ಬೇಕು ಎಂದು ತಿಳಿಸಿದರು.

ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲಿ ಕಡ್ಡಾಯವಾಗಿ ಮೂಲಭೂತ ಸೌಲಭ್ಯಗಳಾದ ಶೌಚಾಲಯ, ಕುಡಿಯುವ ನೀರು ಹಾಗೂ ಇತರೆ ವ್ಯವಸ್ಥೆಗಳು ಇರಬೇಕು, ಇಲ್ಲದಿದ್ದಲ್ಲಿ ಪರವಾನಿಗೆ ರದ್ದು ಪಡಿಸಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚನೆ ನೀಡಿದರು.

ವಿಡಿಯೋ ಸಂವಾದದಲ್ಲಿ ಆಹಾರ ನಾಗರಿಕ ಇಲಾಖೆ ಉಪ ನಿರ್ದೇಶಕರಾದ ಅರುಣ್‌ಕುಮಾರ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ದೂದ್‌ಪೀರ್ ಮತ್ತಿತರರು ಬಾಗವಹಿಸಿದ್ದರು.

ಭದ್ರತಾ ಸಂಸ್ಥೆಗಳಿಗೆ ಮಾಹಿತಿ ನೀಡದೆ ವಿದೇಶಗಳಿಗೆ ರಾಹುಲ್ ಭೇಟಿ

• ಪ್ರಜೋದಯ ವರದಿ

ಪಟ್ನಾ: ದೇಶದ ಭದ್ರತಾ ಸಂಸ್ಥೆಗಳಿಗೆ ಮಾಹಿತಿ ನೀಡದೇ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿದೇಶ ಪ್ರವಾಸ ಕೈಗೊಳ್ಳುತ್ತಿದ್ದಾರೆಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಬುಧವಾರ ಆರೋಪಿಸಿದರು.

ಕಳೆದ ವಾರ ದೆಹಲಿಯಲ್ಲಿ ನಡೆದ ಎಐ ಶೃಂಗ ಸಭೆಯಲ್ಲಿ ಅಮೇರಿಕ-ಭಾರತ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ಪ್ರಧಾನಿ ರಾಜಿ ಮಾಡಿಕೊಂಡಿದ್ದಾರೆಂದು ಆರೋಪಿಸಿಯುವ ಕಾಂಗ್ರೆಸ್‌ನ ಕೆಲ ಕಾರ್ಯಕರ್ತರು ಬಟ್ಟೆ ಬಿಚ್ಚಿ ಪ್ರತಿಭಟನೆ ನಡೆಸಿದ್ದರು. ಅದರ ಬೆನ್ನಲ್ಲೇ ರಾಹುಲ್ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿರುವ ನಿತಿನ್, ನೆಹರು-ಇಂದಿರಾ ಕುಟುಂಬದ ರಾಜಿ ಕಾರ್ಯವನ್ನು ಬಹಿರಂಗ ಪಡಿಸುತ್ತೇನೆಂದು ಹೇಳಿದರು.

ಭದ್ರತಾ ಸಂಸ್ಥೆಗಳಿಗೆ ಮಾಹಿತಿ ನೀಡದೇ ರಾಹುಲ್ ಅವರು 247 ಬಾರಿ ವಿದೇಶಗಳಿಗೆ ಭೇಟಿ ನೀಡಿದ್ದಾರೆ. ಇದೆಲ್ಲವೂ ರಾಹುಲ್ ಗಾಂಧಿಯವರ ರಾಜಿ ಕಾರ್ಯದ ಭಾಗವಾಗಿದೆ ಎಂದು ದೂರಿದರು. ರಾಹುಲ್ ಅವರ ಅಜ್ಜ ಜವಾಹರಲಾಲ್ ನೆಹರೂ ಅವರಿಂದ ಪ್ರಾರಂಭವಾಗಿರುವ ಈ ರಾಜಿ ಕಾರ್ಯ ತಲೆಮಾರುಗಳವರೆಗೆ ಮುಂದುವರಿದಿದೆ ಎಂದು ಪ್ರತಿಪಾದಿಸಿದರು.

ಪಕ್ಷದ ವಿಚಾರದಲ್ಲಿ ಎ.ಬಿ.ಪಾಟೀಲ, ನಾನು ಒಂದೇ

• ಪ್ರಜೋದಯ ವರದಿ

ಹುಕ್ಕೇರಿ (ಬೆಳಗಾವಿ): ಸಂಘ-ಸಂಸ್ಥೆಗಳ ಚುನಾವಣೆ ಬಂದಾಗ ಮಾಜಿ ಸಚಿವ ಎ.ಬಿ. ಪಾಟೀಲ ಹಾಗೂ ನಾನು ಬೇರೆಬೇರೆ. ಪಕ್ಷದ ವಿಚಾರ ಬಂದಾಗ ನಾವಿಬ್ಬರೂ ಒಂದೇ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಹೇಳಿದರು.

ಹುಕ್ಕೇರಿಯಲ್ಲಿ ಬುಧವಾರ ಸುದ್ದಿಗಾರರೊಂದಿಗೆಮಾತನಾಡಿದ ಅವರು, ಸ್ಥಳೀಯವಾಗಿ ಸಂಘ- ಸಂಸ್ಥೆಗಳ ಚುನಾವಣೆ ಬಂದಾಗ ಮಾಜಿ ಸಚಿವ ಎ.ಬಿ.ಪಾಟೀಲ ಹಾಗೂ ನಾವು ಪ್ರತ್ಯೇಕ ಪ್ರಯತ್ನ ಮಾಡಿದ್ದೇವೆ. ಕಾಂಗ್ರೆಸ್‌ನ ಕೆಲಸಗಳು ಬಂದರೆ ಒಂದಾಗಿ ಕೆಲಸ ಮಾಡಿದ್ದೇವೆ ಎಂದರು.

ನಕಲಿ ಆಧಾರ ಕಾರ್ಡ್ ಸೃಷ್ಟಿಸಿ ಜಮೀನು ಕಬಳಿಕೆ ಮಾಡುವಂತಹ ಭೂಗಳ್ಳರ ವಿರುದ್ಧ ಈಗಾಗಲೇ ಕಠಿಣ ಕ್ರಮ ಕೈಗೊಳ್ಳ ಲಾಗಿದೆ. ಹುಕ್ಕೇರಿ ತಾಲ್ಲೂಕಿನಲ್ಲಿ ಭೂಗಳ್ಳರ ಪ್ರಕರಣಗಳು ಸಾಕಷ್ಟು ಕಂಡುಬರುತ್ತಿದ್ದು, ಇಂಥಹ ದಂಧೆಗೆ ಕೈಹಾಕಿದ ವ್ಯಕ್ತಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಇಡೀ ಜಿಲ್ಲೆಯಲ್ಲೇ ಈ ಭೂ ಮಾಫಿಯಾಗೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ದಲಿತ ಮುಖ್ಯಮಂತ್ರಿ ಕೂಗು ನಮ್ಮ ಕೈಯಲಿಲ್ಲ. ಅದರ ಬಗ್ಗೆ ಮಾತನಾಡುವುದು ಅನವಶ್ಯಕ ಸಮಸ್ಯೆ ಉದ್ಭವವಾಗುತ್ತಿದೆ ಹೊರತು ಉಪಯೋಗ ಏನೂ ಆಗುವುದಿಲ್ಲ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

25 ಶಾಸಕರು ತಮಗೂ ಸಚಿವ ಸ್ಥಾನ ನೀಡಬೇಕೆಂದು ಹೈಕಮಾಂಡ್‌ಗೆ ಪತ್ರ ಬರೆದಿದ್ದಾರೆ ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವ, ಅದರಲ್ಲಿ ತಪ್ಪೇನಿದೆ. ಅವರವರ ಅರ್ಹತೆ ನೋಡಿ ಅವರಿಗೆ ಕೊಡಬಹುದು.ಇಲ್ಲವೆಂದು ಯಾರೂ ಎಲ್ಲಿಯೂ ಹೇಳಿಲ್ಲ ಎಂದರು.

ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ವಿಳಂಬ ಮಾಡುತ್ತಿರುವುದನ್ನು ಖಂಡಿಸಿ ವಿದ್ಯಾ ರ್ಥಿಗಳು ಪ್ರತಿಭಟನೆ ಮಾಡಿದ್ದಾರೆ. ಇದು ಬಿಜೆಪಿ ಹಾಗೂ ಕಾಂಗ್ರೆಸ್ ಸಮಸ್ಯೆಯಲ್ಲ. ಅದರ ಬಗ್ಗೆ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡ ಒಂದು ಸಭೆ ಮಾಡಿದ್ದಾರೆ ಎಂದು ಹೇಳಿದರು.

ಗುರಿ-ಸಾಧನೆ ಬಿಟ್ಟು ಸಮಸ್ಯೆ ಗಂಭೀರತೆ ಅರಿತುಕೊಳ್ಳಿ

» ಮೊದಲನೇ ಪುಟದಿಂದ

ಈ ವೇಳೆ ಮಧ್ಯಪ್ರವೇಶಿಸಿದ ಕೆ.ಎಂ.ಶಿವಲಿಂಗೇಗೌಡ ಅವರು, ಸಂಬಂಧಿತ ಅಧಿ ಕಾರಿಗಳನ್ನು ತಕ್ಷಣ ಅಮಾನತು ಮಾಡುವಂತೆ ಸಚಿವರಿಗೆ ಸಲಹೆ ನೀಡಿದರು. ಇದಕ್ಕೆ ಸಚಿ ವರು, ನಾವು ಪ್ರಶ್ನೆ ಮಾಡಬಾರದೇ, ನೀವು ಪ್ರಶ್ನಾತೀತರಾ. ಪ್ರಶ್ನೆ ಮಾಡಿದರೆ ನಮ್ಮ ಗೌರವವೇ ಕಡಿಮೆಯಾಗುತ್ತದೆ ಎನ್ನುವ ಸ್ಥಿತಿ ಬಂದಿದೆಯೇ ಎಂದು ಅಸಮಾಧಾನ ಹೊರಹಾಕಿದರು.

ಒಂದು ಕಟ್ಟಡದ ಕಥೆ ಹೀಗಿದ್ದರೆ, ನಿಮ್ಮ ಬಳಿ ಚಿಕಿತ್ಸೆಗೆ ಬರುವ ಜಾನುವಾರುಗಳ ಪರಿಸ್ಥಿತಿ ಏನು. ಮೂಲ ಸೌಕರ್ಯ ಹಾಗು ಸೇವಾ ಗುಣಮಟ್ಟ ಸುಧಾರಣೆಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಈ ವೇಳೆ ಸಂಸದ ಶ್ರೇಯಸ್ ಪಟೇಲ್ ಕೂಡ ಕೋಪಗೊಂಡು, ಸಚಿವರು ಸ್ಥಳ ಪರಿಶೀಲನೆ ನಡೆಸಿದ್ದರೂ ಆ ಬಗ್ಗೆ ಸರಿಯಾದ ಮಾಹಿತಿ ತಿಳಿದುಕೊಳ್ಳಬೇಕೆಂಬ ಕನಿಷ್ಠ ಆಸಕ್ತಿಯೂ ಇಲ್ಲವೇ ಎಂದು ಗರಂ ಆದರು.

ಕೆಪಿಎಸ್ ಶಾಲೆ ಸರ್ಕಾರದ ಮಹತ್ವದ ಹೆಜ್ಜೆ

ಹಳ್ಳಿಗಳಲ್ಲಿ ಕೆಲವೆಡೆ ನಾಲ್ಕೈದು ಮಕ್ಕಳು ಮಾತ್ರ ಶಾಲೆಗೆ ಬರುತ್ತಿದ್ದು, ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತೆ ನಾಮ್ ಕೇ ವಾಸ್ತೆಗೆ ಶಾಲೆಗಳು ನಡೆಯುತ್ತಿರುವ ಪರಿಸ್ಥಿತಿ ಇದೆ. ಇದರಿಂದ ಮಕ್ಕಳಿಗೆ ಸಮರ್ಪಕ ಶಿಕ್ಷಣ ಸಿಗುತ್ತಿಲ್ಲ. ಈ ಹಿನ್ನಲೆ ಕೆಪಿಎಸ್ ಶಾಲೆಗಳನ್ನು ಬಲಪಡಿಸಿ ಮ್ಯಾಗ್ನೆಟ್ ಶಾಲೆಗಳಾಗಿ ರೂಪಾಂತರಿಸುವ ಮೂಲಕ ಉತ್ತಮ ಸೌಕರ್ಯ, ಅರ್ಹ ಶಿಕ್ಷಕರು ಮತ್ತು ಗುಣಮಟ್ಟದ ಬೋಧನೆ ಒದಗಿಸುವ ಉದ್ದೇಶ ಸರ್ಕಾರದ್ದಾಗಿದೆ ಎಂದು ಸಚಿವರು ಹೇಳಿದರು.

ಜಿಲ್ಲೆಯಲ್ಲಿ ಪ್ರಸ್ತುತ 15 ಕೆಪಿಎಸ್ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಎಲ್ಲಾ ಶಾಲೆಗಳಲ್ಲೂ ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಕೆಪಿಎಸ್ ಶಾಲೆಗಳನ್ನು ಮ್ಯಾಗ್ನೆಟ್ ಶಾಲೆಗಳಾಗಿ ಪರಿವರ್ತಿಸುವ ಮೂಲಕ ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ ಎಂದು ಹೇಳಿದರು.

ಗ್ಯಾರಂಟಿ ಅನುಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಹೆಚ್.ಎಂ.ರೇವಣ್ಣ, ಶಾಸಕರಾದ ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ ಮತ್ತಿತರರು ಹಾಜರಿದ್ದರು.

ಸ್ಥಳೀಯ ಸಂಸ್ಥೆ ಮೈತ್ರಿ ಬಿಜೆಪಿ ತೀರ್ಮಾನಿಸಲಿ

» ಮೊದಲನೇ ಪುಟದಿಂದ

ಗೌಡರ ಬೆಂಬಲ ಕೋರಿದ ಉದ್ಯೋಗಾಕಾಂಕ್ಷಿಗಳು: ಜೆ.ಪಿ.ಭವನದಲ್ಲಿ ದೇವೇಗೌಡ ಅವರನ್ನು ಭೇಟಿಯಾದ ಉದ್ಯೋಗಾಕಾಂಕ್ಷಿಗಳು ಮನವಿ ಸಲ್ಲಿಸಿ, ಹೋರಾಟಕ್ಕೆ ಬೆಂಬಲ ಕೊಡುವಂತೆ ಕೋರಿದರು.

ಭೇಟಿ ಬಳಿಕ ಮಾತನಾಡಿದ ಉದ್ಯೋಗಾಕಾಂಕ್ಷಿಗಳು, ದೇವೇಗೌಡರು ನಮಗೆ ಬೆಂಬಲ ಕೊಟ್ಟಿದ್ದಾರೆ. ಸರ್ಕಾರ ಒಳಮೀಸಲಾತಿ, ಸಮೀಕ್ಷೆಯ ನಾಟಕ ಮಾಡುತ್ತಿದೆ. ಇದರ ಬಗ್ಗೆಯೂ ಎಲ್ಲರಿಗೂ ಗೊತ್ತಿದೆ. ಓದುತ್ತಿರುವ ವಿದ್ಯಾರ್ಥಿ ಗಳಿಗೆ ಲೈಬ್ರರಿ ಶುಲ್ಕ ಕಟ್ಟಲು ಆಗುತ್ತಿಲ್ಲ, ಕೂಡಲೇ ಸರ್ಕಾರ ಎಚ್ಚೆತ್ತುಕೊಂಡು ಹುದ್ದೆಗಳ ನೇಮಕ ಮಾಡಬೇಕು. ಇಲ್ಲವಾದರೆ ಮತ್ತೆ ದೊಡ್ಡಮಟ್ಟದ ಹೋರಾಟ ಮಾಡುತ್ತೇವೆ ಅಂತ ಸರ್ಕಾರ ವಿರುದ್ಧ ಕಿಡಿಕಾರಿದರು.

ಸರ್ಕಾರ ಪ್ರತಿ ವರ್ಷ 1 ಲಕ್ಷ ಹುದ್ದೆ ಸೃಷ್ಟಿ ಮಾಡುತ್ತೇವೆಂದು ಹೇಳಿತ್ತು. ಆದರೆ, ಹುದ್ದೆಗಳ ಸೃಷ್ಟಿಸುವ ಕೆಲಸ ಮಾಡಿಲ್ಲ, ಸುಳ್ಳು ಆಶ್ವಾಸನೆ ಯಾಕೆ ಕೊಡಬೇಕು. ಕಳೆದ ಒಂದು ವರ್ಷದಿಂದ ಎಲ್ಲಾ ಕಡೆ ಹೋರಾಟ ನಡೆಸುತ್ತಿದ್ದೇವೆ. ಸರ್ಕಾರ ಕಿಂಚಿತ್ತು ಕಾಳಜಿ ವಹಿಸುತ್ತಿಲ್ಲ. ಬೇರೆ ಬೇರೆ ದೇಶಗಳಲ್ಲಿ ನಡೆಯುತ್ತಿರುವಂತೆ ಹೋರಾಟ ಕರ್ನಾಟಕದಲ್ಲಿ ನಡೆಯಬಾರದೆಂದರೆ ವರ್ಷಕ್ಕೆ ಲಕ್ಷ ಹುದ್ದೆ ಸೃಷ್ಟಿ ಮಾಡಬೇಕು. ಇಲ್ಲವಾದರೆ ಕರ್ನಾಟಕದಲ್ಲಿ ಕ್ರಾಂತಿ ಆಗುತ್ತದೆ ಎಚ್ಚರಿಕೆ ಕೊಟ್ಟರು.

ವಾಯುಭಾರ ಕುಸಿತ: ಜಿಲ್ಲೆಯ ವಿವಿಧೆಡೆ ಮಳೆ ಸಿಂಚನ

» ಮೊದಲನೇ ಪುಟದಿಂದ

ಕೆಲವು ಪ್ರದೇಶಗಳಲ್ಲಿ ಮಳೆ ಸುರಿದಿದೆ. ಸಕಲೇಶಪುರ ತಾಲ್ಲೂಕಿನ ವಿವಿಧೆಡೆ ಉತ್ತಮ ಮಳೆಯಾಗಿದೆ. ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ, ಹಾಸನ ತಾಲ್ಲೂಕಿನ ದುದ್ದ, ಸಾಲಗಾಮೆ, ಶಾಂತಿಗ್ರಾಮ ಹಾಗು ಆಲೂರು ತಾಲ್ಲೂಕಿನ ಪಾಳ್ಯ ಸೇರಿ ವಿವಿಧ ಗ್ರಾಮೀಣ ಪ್ರದೇಶಗಳಲ್ಲಿ ಮಳೆಯಾದ ವರದಿಯಾಗಿದೆ.

ಕಾಫಿ ಬೆಳೆಗೆ ಅನುಕೂಲ: ಈ ಅಕಾಲಿಕ ಮಳೆಯಿಂದ ಕಾಫಿ ಬೆಳೆಗಾರರಿಗೆ ಹೆಚ್ಚಿನ ಅನುಕೂಲಕರವಾಗಿದೆ. ಕೆಲ ದಿನಗಳ ಹಿಂದೆ ಮಳೆಯಾಗಿ ದ್ದರಿಂದ ಕಾಫಿ ತೋಟಗಳಿಗೆ ನೀರು ಹಾಯಿಸುವುದು ಅನಿ ವಾರ್ಯವಾಗಿತ್ತು. ಈಗಾಗಲೇ ಬೆಳೆಗಾರರು ಒಂದು ಸುತ್ತಿನ ನೀರು ಹಾಯಿಸಿದ್ದರು. ಈ ನಡುವೆ ಮಳೆಯಾಗುತ್ತಿರುವುದು ಮತ್ತಷ್ಟು ಅನುಕೂಲವಾಗಿದೆ.

ಶಿವಲಿಂಗೇಗೌಡ ಆಹ್ವಾನಿಸಿದರೆ ಅರಸೀಕೆರೆಯಲ್ಲೇ ಸ್ಪರ್ಧೆ

» ಮೊದಲನೇ ಪುಟದಿಂದ

ಮುಂದಿನ ದಿನಗಳಲ್ಲಿ ದಾಖಲೆ ಸಮೇತ ತಾಲ್ಲೂಕಿನ ಜನತೆಗೆ ತಿಳಿಸುತ್ತೇನೆಂದು ಹೇಳಿದರು.

ರಾಜ್ಯ ಬಜೆಟ್‌ನಲ್ಲಿ ನಿಮ್ಮ ನಿರೀಕ್ಷೆ ಏನೆಂಬ ಪ್ರಶ್ನೆಗೆ, ಕುಮಾರಸ್ವಾಮಿ ಆಡಳಿತ ನಂತರ ಹಾಸನ ಅಭಿವೃದ್ಧಿಗೆ ತಡೆ ಬಿದ್ದಿದೆ. ಈಗ ಏನು ಮಾಡುತ್ತಾರೋ ಕಾದು ನೋಡೋಣ. ಮುಂದಿನ ಚುನಾವಣೆಯಲ್ಲಿ ಜನರೇ ಉತ್ತರ ಕೊಡಲಿದ್ದಾರೆ. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಸೇರಿ ಸ್ಥಳೀಯ ಸಂಸ್ಥೆ ಚುಣಾವಣೆಗೆ ನಮ್ಮ ಮುಖಂಡರು, ಪಕ್ಷ ಸಿದ್ಧತೆ ಮಾಡಿಕೊಂಡಿದೆ. ಬಿಜೆಪಿ ಜೊತೆ ಮೈತ್ರಿ ಬಗ್ಗೆ ದೇವೇಗೌಡರು, ಕುಮಾರಣ್ಣ ಸೇರಿ ರಾಜ್ಯ ನಾಯಕರು ತೀರ್ಮಾನಿಸುವರು ಎಂದರು.

ಮಾಜಿ ಶಾಸಕ ಜಿ.ಎಸ್. ಪರಮೇಶ್ವರಪ್ಪ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಾಣಾವರ ಅಶೋಕ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ರಾಂಪುರ ಶೇಖರಪ್ಪ, ಮುಖಂಡರಾದ ವಿವೇಕ್ ಲಾಯರ್, ಕೆಂಕೆರೆ ಕೇಶವಮೂರ್ತಿ, ನಗರಸಭೆ ಮಾಜಿ ಅಧ್ಯಕ್ಷ ಗಿರೀಶ್, ಸದಸ್ಯ ಹರ್ಷವರ್ಧನ್, ಮುಖಂಡರಾದ ಲಾಳನಕೆರೆ ಯೋಗೇಶ್, ಬಂಡಿಗೌಡ, ರಾಜಣ್ಣ ಇದ್ದರು.

ಸಿಎಂ ಬದಲಾವಣೆ ಹೇಳಿಕೆ ಕೇಳಿ ನೋವಾಗಿದೆ

» ಮೊದಲನೇ ಪುಟದಿಂದ

ಇಡೀ ಜಿಲ್ಲೆಯ ಗ್ಯಾರಂಟಿ ಯೋಜನೆಗಳ ಮಾಹಿತಿಯನ್ನು ಸಂಗ್ರಹಿಸಲು ಈಗಾಗಲೇ ಮೀಡಿಯಾ ಸೆಲ್ ಆರಂಭಿಸಲಾಗಿದೆ. ಉತ್ತಮವಾಗಿ ಕಾರ್ಯ ನಿರ್ವಹಿಸುವವರಿಗೆ ಬಹುಮಾನಗಳನ್ನು ನೀಡಲಾಗುವುದು. ನಮ್ಮ ಸಮಿತಿಯ ಅಧ್ಯಕ್ಷರು ಪರಿ ಶೀಲನೆ ನಡೆಸುತ್ತಿದ್ದಾರೆ. ಅವರು ಮುಂದಿನ ದಿನಗಳಲ್ಲಿ ಮನೆ ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆಂದು ಹೇಳಿದರು.

ಧಾರವಾಡದಲ್ಲಿ ನಡೆದ ಉದ್ಯೋಗಾಕಾಂಕ್ಷಿಗಳ ಪ್ರತಿಭಟನೆ ಕುರಿತು ಮಾತನಾಡಿದ ಅವರು, ವಿದ್ಯಾರ್ಥಿ ನಾಯಕನಾಗಿ ಹೋರಾಟದ ಮಹತ್ವ ತಿಳಿದಿದ್ದರೂ, ಪರಿಸ್ಥಿತಿಯನ್ನು ಅವಲೋಕನ ಮಾಡಿ ಕ್ರಮ ಕೈಗೊಳ್ಳಬೇಕು. ಹಿಂದಿನ ಸರ್ಕಾರದ ಅವಧಿಯಲ್ಲಿ ನೇಮಕಾತಿಯಲ್ಲಿ ಮೋಸ-ವಂಚನೆ ನಡೆದ ಕಾರಣ ಪ್ರಕ್ರಿಯೆ ಸ್ಥಗಿತಗೊಂಡಿತ್ತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ 40 ಸಾವಿರ ಉದ್ಯೋಗಗಳನ್ನು ನೀಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ನೇಮಕಾತಿ ನಡೆಯಲಿದೆ ಎಂದು ಭರವಸೆ ನೀಡಿದರು.

ಪ್ರೋ ಲೀಗ್ ಹಾಕಿ: ಕೊನೆಗೂ ಗೆಲುವು ದಾಖಲಿಸಿದ ಭಾರತ ತಂಡ

• ಪ್ರಜೋದಯ ವರದಿ

ಹೋಬಾರ್ಟ್: ಎಫ್‌ಐಎಚ್ ಪ್ರೋ ಲೀಗ್ ಋತುವಿನಲ್ಲಿ ಭಾರತ ತಂಡದ ಸೋಲಿನ ಸರಪಣಿ ಕೊನೆಗೂ ಮುರಿಯಿತು. ಹಾರ್ದಿಕ್ ಸಿಂಗ್ ನೇತೃತ್ವದ ತಂಡ ಬುಧವಾರ ನಡೆದ ಪಂದ್ಯದಲ್ಲಿ ಆತಿಥೇಯ ಆಸ್ಟ್ರೇಲಿಯಾ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ 3-1 ಗೋಲು ಗಳಿಂದ ಸೋಲಿಸಿತು. ನಿಗದಿ ಅವಧಿಯ ಆಟ 1-1 ಸಮಬಲಗೊಂಡಿತ್ತು.

ಆಸ್ಟ್ರೇಲಿಯಾ ವಿಶ್ವಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿದ್ದು, ಈ ಗೆಲುವು ಭಾರತಕ್ಕೆ ಆತ್ಮವಿಶ್ವಾಸ ಗಳಿಸಲು ನೆರವಾಗಲಿದೆ. ಭಾರತ ಈ ಋತುವಿನಲ್ಲಿ ಈ ಮೊದಲು ಆಡಿದ ಎಲ್ಲಾ ಏಳು ಪಂದ್ಯಗಳನ್ನು ಸೋತಿತ್ತು. ಬುಧವಾರ ನಡೆದ ಪಂದ್ಯದ ಮೊದಲ ಮೂರು ಕ್ವಾರ್ಟರ್‌ಗಳಲ್ಲಿ ಎರಡೂ ತಂಡಗಳಿಂದ ಉತ್ತಮ ಪೈಪೋಟಿ ಕಂಡುಬಂದಿತು. ಆದರೆ ಈ ಅವಧಿ ಗೋಲು ರಹಿತವಾಯಿತು. 49ನೇ ನಿಮಿಷ ಜೆರೆಮಿ ಹೆವಾರ್ಡ್ ಅವರು ಪೆನಾಲ್ಟಿ ಕಾರ್ನರ್ ಅನ್ನು ಗೋಲಾಗಿ ಪರಿವರ್ತಿಸಿ ಆಸ್ಟ್ರೇಲಿಯಾ ತಂಡಕ್ಕೆ ಮುನ್ನಡೆ ಒದಗಿಸಿದರು. ಆದರೆ ಆತಿಥೇಯ ತಂಡದ ಸಂತಸ ಕ್ಷಣಿಕವಾಯಿತು. ಎರಡೇ ನಿಮಿಷಗಳ ನಂತರ ಶಿಲಾನಂದ ಲಾಕ್ರಾ ಅವರು ಆಕರ್ಷಕ ಫೀಲ್ಡ್ ಗೋಲಿನ ಮೂಲಕ ಸ್ಕೋರ್ ಭಾರತ ತಂಡವು ಸಮಬಲ ಸಾಧಿಸಲು ನೆರವಾದರು.

ಎರಡೂ ತಂಡಗಳು ನಿರ್ಣಾಯಕ ಗೋಲು ಗಳಿಸಲು ಇನ್ನಿಲ್ಲದ ಯತ್ನದಲ್ಲಿ ತೊಡಗಿದವು. ಆದರೆ, ಪಂದ್ಯ 1-1 ರಲ್ಲಿ ಸಮಬಲದಲ್ಲಿ ಕೊನೆಗೊಂಡ ಕಾರಣ ಪೆನಾಲ್ಟಿ ಶೂಟೌಟ್ ಮೂಲಕ ಫಲಿತಾಂಶ ನಿರ್ಧರಿಸಲಾಯಿತು.

ಶೂಟೌಟ್‌ನಲ್ಲಿಲಾಕ್ರಾ, ಮಣಿಂದರ್ ಸಿಂಗ್, ವಿಷ್ಣುಕಾಂತ್ ಸಿಂಗ್ ಅವರು ಚೆಂಡನ್ನು ಗುರಿ ತಲುಪಿಸಿದರು. ಆಸ್ಟ್ರೇಲಿಯಾ ಪರ ಏಕೈಕ ಗೋಲನ್ನು ಹೆವಾರ್ಡ್ ಗಳಿಸಿದರು. ಉಳಿದವರ ಯತ್ನಗಳನ್ನು ಕನ್ನಡಿಗ ಗೋಲ್‌ಕೀಪರ್ ಹೊನ್ನೇನಹಳ್ಳಿ ಶಶಿಕುಮಾರ್ ಮೋಹಿತ್ ತಡೆದ ಪರಿಣಾಮ ಭಾರತ ಕೊನೆಗೂ ಋತುವಿನ ಮೊದಲ ಗೆಲುವು ಸಾಧಿಸಿ ನಿಟ್ಟುಸಿರುಬಿಟ್ಟಿತು.

ರೂರ್ಕೆಲಾ ಲೆಗ್ ಮೂಲಕ ಪ್ರೊ ಲೀಗ್ ಋತು ಆರಂಭಿಸಿದ ಭಾರತ, ತವರಿನಲ್ಲಿ ಎಲ್ಲಾ ನಾಲ್ಕೂ ಪಂದ್ಯಗಳನ್ನು ಸೋತು ನಿರಾಶೆ ಅನುಭ ವಿಸಿತ್ತು. ಹೋಬಾರ್ಟ್ ಲೆಗ್‌ನಲ್ಲೂ ಭಾರತ ತಂಡವು ಸ್ಪೇನ್ ಮತ್ತು ಆಸ್ಟ್ರೇಲಿಯಾ ಎದುರಿನ ಮೊದಲ 3 ಪಂದ್ಯಗಳಲ್ಲಿ ಸೋಲನುಭವಿಸಿತ್ತು. ಅದರಲ್ಲಿ ತಲಾ ಒಂದು ಪಂದ್ಯಗಳು ಶೂಟೌಟ್‌ನಲ್ಲಿ ಇತ್ಯರ್ಥಗೊಂಡಿದ್ದವು.

ವಿಶ್ವಮಾತೃಭಾಷಾ ದಿನಾಚರಣೆಯಲ್ಲಿ ಡಾ.ಎನ್.ಸಿ.ರವಿ ಅಭಿಮತ

ಕನ್ನಡ ಭಾಷೆ ಸಂವಹನ ಸಾಧನವಲ್ಲ, ಸಾಂಸ್ಕೃತಿಕ ಗುರುತು

• ಪ್ರಜೋದಯ ವರದಿ

ಹಾಸನ: ಕನ್ನಡ ಭಾಷೆ ಕೇವಲ ಸಂವಹನ ಸಾಧನವಲ್ಲ, ಅದು ಕನ್ನಡಿಗರ ಭಾವನಾತ್ಮಕ ಸಂಪರ್ಕ ಸಾಧನ ಮತ್ತು ಸಾಂಸ್ಕೃತಿಕ ಗುರುತಾಗಿವೆ ಎಂದು ನಗರದ ಸರ್ಕಾರಿ ವಿಜ್ಞಾನ ಕಾಲೇಜು ಸಹ ಪ್ರಾಧ್ಯಾಪಕ ಡಾ.ಎನ್.ಸಿ.ರವಿ ಅವರು ಹೇಳಿದರು.

ನಗರದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು (ಸ್ವಾಯತ್ತ) ಕನ್ನಡ ವಿಭಾಗದ ವತಿಯಿಂದ ನಡೆದ ವಿಶ್ವಮಾತೃಭಾಷಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಿ.ಎಂ.ಶ್ರೀ ಅವರು ಹೇಳುವಂತೆ ಮೊದಲು ತಾಯಿ ಹಾಲು ಕುಡಿದು ಲಲ್ಲೆಯಿಂದ ತೊದಲು ನುಡಿದ ಭಾಷೆ ನಮ್ಮದು. ಹೆತ್ತ ತಾಯಿ, ತಾಯ್ನೆಲ ಮತ್ತು ತಾಯ್ನುಡಿ ಇವು ಮೂರು ಕೂಡ ಭಾವನಾತ್ಮಕವಾಗಿ ಒಂದೇ ನೆಲೆಯಲ್ಲಿ ಪರಿಭಾವಿಸಬೇಕೆಂದು ತಿಳಿಸಿದರು.

ವಿಶ್ವ ಮಾತೃಭಾಷಾ ದಿನದ ಸಮಯಲ್ಲಿ ಕೇವಲ ಭಾಷೆಯೊಂದರ ಪ್ರಶ್ನೆಯೂ ಆಗಿದೆ. ಅಂತರರಾಷ್ಟ್ರೀಯ ಮಾತೃಭಾಷಾ ದಿನವನ್ನು ಪ್ರತಿ ವರ್ಷ ಫೆ.21ರಂದು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಭಾಷಾ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಉತ್ತೇಜಿಸಲು ಮತ್ತು ಬಹುಭಾಷಾ ತತ್ವವನ್ನು ಪ್ರೋತ್ಸಾಹಿಸಲು ಮತ್ತು ಮಾತೃಭಾಷೆಯ ಮಹತ್ವದ ಬಗ್ಗೆ ಅರಿವು ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆಂದು ಹೇಳಿದರು.

ಪರೀಕ್ಷಾವಿಭಾಗದ ನಿಯಂತ್ರಕ ಡಾ.ಕೆ.ಡಿ.ಮುರಳಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಸ್ತುತ ದಿನಮಾನದಲ್ಲಿ ಇಂಗ್ಲೀಷ್ ಗೊತ್ತಿದ್ದರೆ ಬುದ್ಧಿವಂತರು ಎಂಬ ಭಾವನೆ ಇದೆ. ಕನ್ನಡ ಭಾಷೆ ಯನ್ನು ಉಳಿಸಬೇಕು, ಬೆಳೆಸಬೇಕು ಈ ನಿಟ್ಟಿನಲ್ಲಿ ಯುವಜನತೆ ಸಾಗ ಬೇಕೆಂದರು.

ಕನ್ನಡ ವಿಭಾಗದ ಮುಖ್ಯಸ್ಥ ದೇವರಾಜು ಅವರು ಮಾತನಾಡಿ, ಇಂದು ಕೆಲವು ಭಾಷೆ ಅವನತಿ ಹೊಂದಿವೆ, ಕೆಲವು ಭಾಷೆ ಜೀವಂತವಾಗಿವೆ. ಭಾಷೆಯ ಅವನತಿ ಎಂದರೆ ಸಂಸ್ಕೃತಿಯ ನಾಶ, ನಾಡಿನ ನಾಶ ಎಂದು ಹೇಳಬಹುದು. ಕನ್ನಡಿಗರಾದ ನಾವೇ ನಮ್ಮ ಭಾಷೆಯನ್ನು ನಾಶ ಮಾಡಬಾರದು. ಮುಂದೊಂದು ದಿನ ಕನ್ನಡ ಭಾಷೆ ಕಣ್ಮರೆ ಯಾಗಬಹುದೆಂದು ಆತಂಕ ವ್ಯಕ್ತಪಡಿಸಿದರು.

ಕಾರ್ಯಕ್ರಮಕ ಸಂಚಾಲಕರಾದ ವೈ.ಆರ್.ಅನಿತಾ ಅವರು ಮಾತನಾಡಿ, ಭಾಷೆ ಎಂಬುದು ಸಂವಹನ ಮಾಧ್ಯಮ, ಮನುಷ್ಯ ಭಾವನೆಗಳನ್ನು ಅಭಿವ್ಯಕ್ತಿಸಲು ಭಾಷೆಯನ್ನು ಬಳಸುತ್ತಾನೆ. ಭಾಷೆಯ ಮಹತ್ವವನ್ನು ತಿಳಿಸಲು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕಾರ್ಯಕ್ರಮದ ರೂಪುರೇಷೆಯನ್ನು ತಿಳಿಸಿದರು.

ಡಾ.ಕೆ.ಎಸ್.ದಿನೇಶ್, ಕನ್ನಡ ವಿಭಾಗದ ಡಾ. ಪ್ರಮೀಳಾ, ಡಾ. ಶ್ರೀನಿವಾಸ್, ಅನುರಾಧಾ ಇದ್ದರು.

ಫೆ.27 ರಂದು ವಿವಿಧ ಕ್ಷೇತ್ರದ ಸಾಧಕರಿಗೆ ಗೌರವ

• ಪ್ರಜೋದಯ ವರದಿ

ಹಾಸನ: ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ಜನ್ಮದಿನದ ಅಂಗವಾಗಿ ಫೆ.27 ರಂದು ನಗರದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರನ್ನು ಗೌರವಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆಂದು ಜಿಲ್ಲಾ ವಿದ್ಯುತ್ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಬಾಲಸುಬ್ರಮಣ್ಯ ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮ ಹೊಸಲೈನ್ ಮುಖ್ಯ ರಸ್ತೆ, ಡಿ.ಆರ್.ಪೊಲೀಸ್ ಕ್ವಾಟ್ರಸ್ ಕ್ರಾಸ್ ರಸ್ತೆಯ ಶಾಂತಣ್ಣನ ಸೊಸೈಟಿ ಬಿಲ್ಡಿಂಗ್‌ನ ಮೊದಲ ಮಹಡಿಯಲ್ಲಿರುವ ಜಿಲ್ಲಾ ವಿದ್ಯುತ್ ಕಾರ್ಮಿಕರ ಸಂಘದ ಕಚೇರಿಯಲ್ಲಿ ನಡೆಯಲಿದೆ. ಸಂಘದ ಜಿಲ್ಲಾಧ್ಯಕ್ಷ ಬಾಬು ಅವರ ಅಧ್ಯಕ್ಷತೆ ವಹಿಸುವರು. ಪ್ರಧಾನ ಕಾರ್ಯದರ್ಶಿ ಬಾಲಸುಬ್ರಮಣ್ಯ, ಉಪಾಧ್ಯಕ್ಷ ವರಪ್ರಸಾದ್, ಸಂಜಯ್, ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದರು.

ಪತ್ರಿಕೋದ್ಯಮ ಕ್ಷೇತ್ರದಿಂದ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರಾದ ಜೆ.ಆರ್.ಕೆಂಚೇಗೌಡ, ಶಿಕ್ಷಣ, ಆರೋಗ್ಯ, ಕಾರ್ಮಿಕರ ಹಿತಾಸಕ್ತಿ, ಕ್ರೀಡೆ, ಸಮಾಜಸೇವೆ, ಪರಿಸರ ಹಾಗು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವ್ಯಕ್ತಿಗಳನ್ನು ಸನ್ಮಾನಿಸಲಾಗುವುದು. ಜಿಲ್ಲಾ ವಿದ್ಯುತ್ ಕಾರ್ಮಿಕರ ಸಂಘ ಮತ್ತು ಸಂಜೀವಿನಿ ಜೀವ ರಕ್ಷಕ ಟ್ರಸ್ಟ್ ಆಶ್ರಯದಲ್ಲಿ ಕಾರ್ಯಕ್ರಮ ನಡೆಯಲಿದೆ. ಕಾರ್ಮಿಕರ ಹಕ್ಕುಗಳ ಪರ ಹೋರಾಟ ಮತ್ತು ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಸಂಘವು, ಸಚಿವರ ಜನ್ಮದಿನವನ್ನು ಸೇವಾ ಚಟುವಟಿಕೆಗಳ ಮೂಲಕ ಆಚರಿಸುವ ನಿರ್ಧಾರ ಕೈಗೊಂಡಿದೆ ಎಂದರು.

ಸಂಘದ ಅಧ್ಯಕ್ಷ ಬಾಬು, ಉಪಾಧ್ಯಕ್ಷ ವರಪ್ರಸಾದ್, ಸಂದೀಪ್ ಇದ್ದರು.

ವೈದ್ಯರೇ ಮಗುವನ್ನು ಆರೈಕೆ ಮಾಡಲಿ

ಮೃತ ಬಾಣಂತಿ ಪತಿ ಪುನೀತ್ ಮನವಿ | ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹ

• ಪ್ರಜೋದಯ ವರದಿ

ಹಾಸನ: ಜಿಲ್ಲಾ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ವೈದ್ಯರ ನಿರ್ಲಕ್ಷ್ಯದಿಂದಲೇ ನನ್ನ ಪತ್ನಿ ಶ್ರುತಿ ಸಾವನ್ನಪ್ಪಿದ್ದಾಳೆ. ಹಾಗಾಗಿ ವೈದ್ಯರೇ ಮುಂದಿನ ಆರು ತಿಂಗಳ ಕಾಲ ನನ್ನ ಮಗುವನ್ನು ಆರೈಕೆ ಮಾಡಿ ನಂತರ ನನಗೆ ಕೊಡಬೇಕೆಂದು ಮೃತರ ಪತಿ ಪುನೀತ್ ಮನವಿ ಮಾಡಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನ ಪತ್ನಿ ಆಸ್ಪತ್ರೆ ಒಳಗೆ ಹೋಗು ವಾಗ ಚೆನ್ನಾಗಿಯೇ ಇದ್ದಳು. ಆಕೆಗೆ ಯಾರು ಚಿಕಿತ್ಸೆ ನೀಡಿದರು ಎಂಬುದೂ ಗೊತ್ತಿಲ್ಲ. ಆಸ್ಪತ್ರೆಗೆ ದಾಖಲಾದ ನಂತರ ಇಂತಹ ದಿನ ಹೆರಿಗೆ ಎಂದು ಹೇಳಲಿಲ್ಲ. ನೋವು ತಡೆದುಕೊ ಎಂದಷ್ಟೇ ಹೇಳಿದ್ದಾರೆ, ಭಾನುವಾರ ರಜಾ ದಿನವಾದ್ದರಿಂದ ವೈದ್ಯರು ಕರ್ತವ್ಯದಲ್ಲಿ ರದೆ ಬೇರೆಡೆ ಹೋಗಿದ್ದರು. ಯುವ ವೈದ್ಯರಿಂದ ಚಿಕಿತ್ಸೆ ಮಾಡಿಸಿದ್ದಾರೆಂದು ಆರೋಪಿಸಿದರು.

ಹೊಟ್ಟೆನೋವು ಎಂದು ಅಂಗಲಾಚಿದರೆ, ವೈದ್ಯರು ನಿರ್ಲಕ್ಷ್ಯದಿಂದ ನಡೆದುಕೊಂಡಿದ್ದಾರೆ. ತುಂಬಾ ಕೇವಲವಾಗಿ ಮಾತನಾಡಿದ್ದಾರೆ. ಆಸ್ಪತ್ರೆ ಹೊರಗೆ ನೋಡಲು ಚೆನ್ನಾಗಿದೆ. ಒಳಗೆ ಯಾವುದೇ ಸೌಲಭ್ಯ ಇಲ್ಲ. ಯಾವುದೇ ಹಿರಿಯ ವೈದ್ಯರು ನನ್ನನ್ನು ಸರಿಯಾಗಿ ನೋಡುತ್ತಿಲ್ಲ ಎಂದು ನನ್ನ ಪತ್ನಿ ದೂರವಾಣಿ ಕರೆ ಮಾಡಿ ಹೇಳಿದ್ದಳು. ಹೆರಿಗೆ ಆದಮೇಲೂ ನನ್ನ ಪತ್ನಿ ಆರೋಗ್ಯವಾಗಿದ್ದಳು, ಬಳಿಕ ಏನಾಯಿತು ಎಂದು ಪ್ರಶ್ನಿಸಿದರು. ನಾವು ಒಳಗೆ ಹೋಗಲು ಭದ್ರತಾ ಸಿಬ್ಬಂದಿ ಬಿಡಲಿಲ್ಲ, ನನಗೆ ಯಾವುದೇ ಪರಿಹಾರ ಬೇಡ, ನನಗೆ ನ್ಯಾಯ ಬೇಕು. ಈ ಆಸ್ಪತ್ರೆಗೆ ಹೆಚ್ಚಾಗಿ ಬಡವರೇ ಬರುತ್ತಾರೆ, ಮುಂದೆ ಯಾರಿಗೂ ಹೀಗೆ ಆಗಬಾರದು. ಸಾವಿರಾರು ಜೀವ ಉಳಿಸಿದ್ದೇವೆ ಎನ್ನುತ್ತಾರೆ. ನನ್ನ ಪತ್ನಿ ಏಕೆ ಸಾಯಿಸಿದರು. ಈಗ ನನ್ನ ಮಗುವನ್ನು ನೋಡಲು ಐಸಿಯುಗೆ ಬಿಡಲಿಲ್ಲ, ನನಗೆ ಮಗು ಬೇಕು. ಮುಂದಿನ ಆರು ತಿಂಗಳ ಕಾಲ ಅವರೇ ಸಂತೈಸಲಿ, ವೈದ್ಯರು ಮಾಡಿರುವ ತಪ್ಪಿಗೆ ಮಗುವನ್ನು ಆರೈಕೆ ಮಾಡಿ ಉಳಿಸಿ ಕೊಡಲಿ ಎಂದು ಮನವಿ ಮಾಡಿದರು.

ಗರ್ಭಿಣಿಯಾಗಿದ್ದರೂ, ಶ್ರುತಿ ಚಟುವಟಿಕೆಯಿಂದ ಇದ್ದಳು. ರಕ್ತ ಹಾಕಿದ ಮೇಲೆ ಹೀಗಾಗಿದೆ. ಸರ್ಕಾರಿ ವೈದ್ಯರು ಖಾಸಗಿಯಾಗಿ ಉತ್ತಮ ಕೆಲಸ ಮಾಡುತ್ತಾರೆ, ಇಲ್ಲಿ ಏಕೆ ಮಾಡಲ್ಲ. ನನಗೆ ಆಗಿರುವುದು ಬೇರೆ ಯಾರಿಗೂ ಆಗೋದು ಬೇಡ, ಸಂಬಂಧಪಟ್ಟವರು ಪರಿಶೀಲಿಸಿ ತಪ್ಪು ಮಾಡಿರುವವರ ಮೇಲೆ ಕ್ರಮ ಆಗಬೇಕೆಂದು ವಿನಂತಿಸಿದರು.

ಮೃತರ ಸಂಬಂಧಿಕರಾದ ಯತೀಶ್, ಲಾವಣ್ಯ, ಶಿವಣ್ಣ, ತೀರ್ಥಪ್ರಸಾದ್, ಜ್ಯೋತಿ, ಯಶು ದೊಡ್ಡಪುರ ಇದ್ದರು.

ಅವೈಜ್ಞಾನಿಕ ಹಂಪ್ಸ್: ಎಚ್ಚೆತ್ತುಕೊಂಡ ಅಧಿಕಾರಿಗಳು

• ಪ್ರಜೋದಯ ವರದಿ

ಹಾಸನ: ಕೈಗಾರಿಕಾ ಪ್ರದೇಶದಲ್ಲಿ ಅವೈಜ್ಞಾನಿಕವಾಗಿ ನಿರ್ಮಿಸಿದ್ದ ಹಂಪ್ಸ್ ನಿಂದ ಸಂಭವಿಸಿದ ಅಪಘಾತದಲ್ಲಿ ಯುವತಿ ಮೃತಪಟ್ಟ ಬಳಿಕ ಎಚ್ಚೆತ್ತು ಕೊಂಡ ಅಧಿಕಾರಿಗಳು ಹಂಪ್‌ಗಳಿಗೆ ಬಿಳಿ ಪಟ್ಟಿ ಬಳಿದು ಪ್ರತಿಫಲಕಗಳನ್ನು ಅಳವಡಿಸಿದ್ದಾರೆ.

ನಗರದ ಕೈಗಾರಿಕಾ ಪ್ರದೇಶದಲ್ಲಿ ಭಾನುವಾರ ರಾತ್ರಿ ಬುಲೆಟ್ ಬೈಕ್‌ನಲ್ಲಿ ಸಂಚರಿಸುತ್ತಿದ್ದ ವೇಳೆ ಹಂಪ್ಸ್ ಹಾರಿಸಿದ ಪರಿಣಾಮ ಬೈಕ್ ನಿಯಂತ್ರಣ ತಪ್ಪಿ ಬಿದ್ದ ಯುವತಿ ಪ್ರಿಯ ಸ್ಥಳದಲ್ಲೇ ಮೃತಪಟ್ಟರೆ, ಬೈಕ್ ಚಲಾಯಿಸುತ್ತಿದ್ದ ಸ್ವಾತಿ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಘಟನೆಯ ನಂತರ ಸ್ಥಳಕ್ಕೆ ಭೇಟಿ ನೀಡಿದ ಸಾರ್ವಜನಿಕರು, ಸೂಚನಾ ಫಲಕ ಅಥವಾ ರಿಫ್ಲೆಕ್ಟರ್ ಇಲ್ಲದೇ ಅವೈಜ್ಞಾನಿಕವಾಗಿ ಹಂಪ್ಸ್ ನಿರ್ಮಿಸಿರುವುದೇ ಅಪಘಾತಕ್ಕೆ ಕಾರಣ ಎಂದು ಆರೋಪಿಸಿದರು. ಘಟನೆ ಬಳಿಕ ಎಚ್ಚೆತ್ತ ಕರ್ನಾಟಕ ಕೈಗಾರಿಕಾ ಪ್ರದೇ ಶಾಭಿವೃದ್ಧಿ ಮಂಡಳಿ ಅಧಿಕಾರಿಗಳು, ಪೊಲೀಸರ ಸೂಚನೆ ಮೇರೆಗೆ ಕೈಗಾ ರಿಕಾ ಪ್ರದೇಶದಲ್ಲಿರುವ ಎಲ್ಲಾ ಹಂಪ್ಸ್ ಗಳಿಗೆ ಬಿಳಿ ಪಟ್ಟೆ ಬಳಿದು, ರಿಫ್ಲೆಕ್ಟರ್‌ಗಳನ್ನು ಅಳವಡಿಸುವ ಕಾರ್ಯ ಕೈಗೊಂಡಿದ್ದಾರೆ.ಅದರಿಂದ ಮುಂದಿನ ದಿನಗಳಲ್ಲಿ ಇಂತಹ ಅಪಘಾತಗಳು ಸಂಭವಿಸುವುದನ್ನು ತಡೆಯುವ ಪ್ರಯತ್ನ ಮಾಡಲಾಗಿದೆ.

ಪ್ರಶಸ್ತಿಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

ಹಾಸನ: ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಡಾ: ಬಾಬು ಜಗಜೀವನರಾಂ ಅವರ 119ನೇ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ರವರ 135ನೇ ಜನ್ಮ ದಿನಾಚರಣೆ ಅಂಗವಾಗಿ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ತಾಲ್ಲೂಕಿನ ಸಹಾಯಕ ನಿರ್ದೇಶಕರ ಕಚೇರಿಗೆ ಮಾ.05 ರಂದು ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸುವುದಾಗಿ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

ಟಿ-20 ವಿಶ್ವಕಪ್: ಇಂದು ಭಾರತ-ಜಿಂಬಾಬ್ವೆ ಪಂದ್ಯ

• ಪ್ರಜೋದಯ ವರದಿ

ಚೆನ್ನೈ: ಟಿ-20 ವಿಶ್ವಕಪ್ ನಡುವಿನ ಸೂಪರ್ 8 ಭಾರತ-ಜಿಂಬಾಬ್ವೆ ವಿರುದ್ಧದ 2ನೇ ಪಂದ್ಯ ಗುರುವಾರ ನಡೆಯಲಿದೆ. ಈ ಪಂದ್ಯ ಗೆಲುವ ತಂಡಕ್ಕೆ ಸೆಮಿಫೈನಲ್ ಆಸೆ ಜೀವಂತವಾಗಿರಲಿದೆ.

ಈ ಪಂದ್ಯದಲ್ಲಿ ಅಕ್ಷರ ಪಟೇಲ್‌ಗೆ ಸ್ಥಾನ ಸಿಗುವ ಸಾಧ್ಯತೆ ಇದೆ.

ಅಕ್ರಮ ಮರಳು ಗಣಿಗಾರಿಕೆ: ಅಧಿಕಾರ ವ್ಯವಸ್ಥೆಗೆ ಸವಾಲು

• ಪ್ರಜೋದಯ ವರದಿ

ಸಕಲೇಶಪುರ: ತಾಲ್ಲೂಕಿನ ಹೇಮಾವತಿ ನದಿ ದಂಡೆ ಪ್ರದೇಶದಲ್ಲಿ ನಿರಂತರವಾಗಿ ನಡೆಯುತ್ತಿರುವ ಅಕ್ರಮ ಮರಳು ಗಣಿಗಾರಿಕೆ ಹಾಗೂ ಸಾಗಾಟ ಪ್ರಕರಣ ಮತ್ತೊಮ್ಮೆ ಬೆಳಕಿಗೆ ಬಂದಿದ್ದು, ಅಧಿಕಾರ ವ್ಯವಸ್ಥೆಗೆ ಸವಾಲು ಎಸೆದಂತ ಘಟನೆ ನಡೆದಿದೆ.

ಮಳಲಿ ಲೇಔಟ್ ಪ್ರದೇಶದಲ್ಲಿ ಅಕ್ರಮವಾಗಿ ಭಾರಿ ಪ್ರಮಾಣದಲ್ಲಿ ಮರಳು ಶೇಖರಣೆ ಮಾಡಿರುವ ಕುರಿತು ಸ್ಥಳೀಯ ಪತ್ರಕರ್ತರು ವಿಡಿಯೋ ಹಾಗೂ ಛಾಯಾಚಿತ್ರ ಸಾಕ್ಷ್ಯಗಳೊಂದಿಗೆ ವರದಿ ಪ್ರಕಟಿಸಿದ ಬೆನ್ನಲ್ಲೇ, ಮರಳು ಮಾಫಿಯಾ ಚಟುವಟಿಕೆಗಳು ಮತ್ತಷ್ಟು ತೀವ್ರಗೊಂಡಿರುವುದು ಕಂಡುಬಂದಿದೆ. ಅಧಿಕಾರಿಗಳು ಸ್ಥಳಕ್ಕೆ ದಾಳಿ ನಡೆಸುವ ಸಾಧ್ಯತೆಯನ್ನು ಮನಗಂಡ ಮರಳು ಕಳ್ಳರು ರಾತ್ರೋರಾತ್ರಿ ಸುಮಾರು 20ಕ್ಕೂ ಹೆಚ್ಚು ಟಿಪ್ಪರ್ ವಾಹನಗಳ ಮೂಲಕ ಮರಳನ್ನು ವ್ಯವಸ್ಥೆಯ ಕಣ್ಣಿಗೆ ಮಣ್ಣು ಎರಚುವ ರೀತಿಯಲ್ಲಿ ಸಾಗಾಟ ಮಾಡಿರುವುದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ.

ಹೇಮಾವತಿ ನದಿ ದಂಡೆ ವ್ಯಾಪ್ತಿಯಲ್ಲಿ ದೀರ್ಘಕಾಲದಿಂದಲೇ ಅಕ್ರಮ ಮರಳು ಗಣಿಗಾರಿಕೆ ಹಾಗೂ ಸಂಗ್ರಹಣೆ ನಡೆಯುತ್ತಿದ್ದು, ಅದರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ರಾಜಸ್ವ ನಷ್ಟವಾಗುತ್ತಿರುವುದಲ್ಲದೆ ಪರಿಸರ ಸಮತೋಲನವೂ ಹದಗೆಡುತ್ತಿದೆ. ಬೇಸಿಗೆ ಕಾಲ ಸಮೀಪಿಸು ತ್ತಿರುವ ಹಿನ್ನಲೆ ನದಿಗೆ ನೀರು ಕುಡಿಯಲು ಆಗಮಿಸುವ ಜಾನುವಾರುಗಳಿಗೆ ಅಪಾಯ ಉಂಟಾಗುವ ಸಾಧ್ಯತೆ ಹೆಚ್ಚಿದ್ದು, ರೈತರ ಜೀವ ಹಾಗೂ ಜೀವನೋಪಾಯಕ್ಕೂ ಧಕ್ಕೆಯಾಗುವ ಸಾಧ್ಯತೆ ಇದೆ ಎಂಬ ಆರೋಪಗಳು ಕೇಳಿಬರುತ್ತಿವೆ.

ಅಕ್ರಮವಾಗಿ ಗಣಿಗಾರಿಕೆ ಮಾಡಿರುವ ಮರಳನ್ನು ಮಳಲಿ ಲೇಔಟ್ ಪ್ರದೇಶದಲ್ಲಿ ನಿರ್ಮಾ ಣವಾಗುತ್ತಿರುವ ಹಲವು ಸೈಟ್‌ಗಳಲ್ಲಿ ಶೇಖರಣೆ ಮಾಡಲಾಗಿದೆ ಎಂಬ ಆರೋಪವೂ ಕೇಳಿಬಂದಿದೆ. ಅಕ್ರಮವಾಗಿ ಮರಳು ಸಂಗ್ರಹಣೆ ಮಾಡಲು ಅವಕಾಶ ನೀಡಿದ ಸೈಟ್ ಮಾಲೀಕರ ವಿರುದ್ಧವೂ ಹಾಗೂ ಕಟ್ಟಡ ನಿರ್ಮಾಣಕ್ಕೆ ಅಗತ್ಯ ಅನುಮತಿ ಪಡೆಯದೇ ಮರಳು ಬಳಸಿರುವವರ ವಿರುದ್ಧವೂ ಪ್ರಕರಣ ದಾಖಲಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ಜೊತೆಗೆ ಅಕ್ರಮವಾಗಿ ಮರಳು ಸರಬರಾಜು ಮಾಡಿದವರ ಮೇಲೂ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದ್ದಾರೆ.

ಪರಿಣಾಮಕಾರಿ ಕಾನೂನು ಕ್ರಮ ಕೈಗೊಳ್ಳಲಾಗುತ್ತಿಲ್ಲ ಎಂಬುದೇ ಮರಳು ಮಾಫಿಯಾದಲ್ಲಿ ತೊಡಗಿರುವವರಿಗೆ ಯಾವುದೇ ಭಯವಿಲ್ಲದಿರುವುದಕ್ಕೆ ಪ್ರಮುಖ ಕಾರಣವಾಗಿದೆ ಎಂಬ ಆರೋಪ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.

ಪೊಲೀಸರಿಂದ ಆಟೋ ಪರಿಶೀಲನೆ | ನಿಯಮ ಉಲ್ಲಂಘಿಸಿದರ ಪ್ರಕರಣ ದಾಖಲು

ಪರವಾನಗಿಲ್ಲದೆ ಆಟೋಗಳು ಸಂಚರಿಸಿದರೆ ಕ್ರಮ

• ಪ್ರಜೋದಯ ವರದಿ

ಬೇಲೂರು: ಪಟ್ಟಣದಲ್ಲಿ ಪರವಾನಿಗಿ ಹಾಗೂ ಅಗತ್ಯ ದಾಖಲೆಗಳಿಲ್ಲದೆ ಆಟೋ ರಿಕ್ಷಾಗಳನ್ನು ಸಂಚರಿಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದೆಂದು ವೃತ್ತ ನಿರೀಕ್ಷಕ ರೇವಣ್ಣ ಅವರು ಎಚ್ಚರಿಕೆ ನೀಡಿದರು.

ಪಟ್ಟಣದ ಜೂನಿಯರ್ ಕಾಲೇಜು ಮೈದಾನದಲ್ಲಿ ಆಟೋ ಚಾಲಕರ ಮತ್ತು ಮಾಲೀಕರ ಸಂಘದ ಸಹಕಾರದೊಂದಿಗೆ ಎಲ್ಲಾ ಆಟೋಗಳನ್ನು ಪರಿಶೀಲಿಸಿ ಮಾತನಾಡಿದ ಅವರು, ಪರಿಶೀಲನಾ ವೇಳೆ ಚಾಲನಾ ಪರವಾನಗಿ, ವಾಹನ ನೋಂದಣಿ ಪತ್ರ (ಆರ್‌ಸಿ), ವಿಮೆ, ಫಿಟ್ನೆಸ್ ಪ್ರಮಾಣಪತ್ರ, ಪರ್ಮಿಟ್ ಸೇರಿ ಎಲ್ಲಾ ದಾಖಲೆ ಗಳನ್ನು ಪರಿಶೀಲಿಸಿದ್ದು, ಅಗತ್ಯ ದಾಖಲೆಗಳಿಲ್ಲದೆ, ನಿಯಮ ಉಲ್ಲಂಘನೆ ಮಾಡಿಕೊಂಡು ವಾಹನ ಚಲಾಯಿಸುತ್ತಿರುವುದು ಕಂಡುಬಂದರೆ ಅಂತಹ ಆಟೋಗಳನ್ನು ತಕ್ಷಣ ಜಪ್ತಿ ಮಾಡುವುದರ ಜೊತೆಗೆ ಸಂಬಂಧಪಟ್ಟವರ ವಿರುದ್ಧ ಪ್ರಕರಣ ದಾಖಲಿಸ ಲಾಗುವುದೆಂದು ತಿಳಿಸಿದರು.

ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಕ್ರಮ ಕೈಗೊಳ್ಳಲಾಗುತ್ತಿದ್ದು, ನಿಯಮಾನುಸಾರವಾಗಿ ವಾಹನ ಚಲಾಯಿಸುವುದು ಪ್ರತಿಯೊಬ್ಬ ಚಾಲಕರ ಕರ್ತವ್ಯ. ಕೆಲವು ಆಟೋಗಳಲ್ಲಿ ಮೀಟರ್ ಬಳಕೆ ಮಾಡದಿರುವುದು, ಹೆಚ್ಚು ಪ್ರಯಾಣಿಕರನ್ನು ಕೂರಿಸುವುದು ಹಾಗೂ ನಿಗದಿತ ಮಾರ್ಗದ ಹೊರತಾಗಿ ಸಂಚರಿಸುವುದು ಕಂಡುಬಂದರೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆಂದು ಸ್ಪಷ್ಟಪಡಿಸಿದರು.

ಆಟೋ ಚಾಲಕರಿಗೆ ಸರ್ಕಾರದ ನಿಯಮಗಳನ್ನು ಪಾಲಿಸುವಂತೆ, ಅಗತ್ಯ ದಾಖಲೆಗಳನ್ನು ಸದಾ ಹೊಂದಿರಲು ಹಾಗೂ ಪ್ರಯಾಣಿಕರೊಂದಿಗೆ ಶಿಷ್ಟವಾಗಿ ವರ್ತಿಸಲು ಸೂಚಿಸಲಾಯಿತು. ಮುಂದಿನ ದಿನಗಳಲ್ಲಿ ಸಹ ಇಂತಹ ತಪಾಸಣೆಗಳನ್ನು ಮುಂದುವರಿಸಲಾಗುವುದೆಂದು ಎಚ್ಚರಿಕೆ ನೀಡಿದರು.

ಪಿಎಸ್‌ಐ ಎಸ್.ಜಿ.ಪಾಟೀಲ್ ಅವರು ಮಾತನಾಡಿ, ಶ್ರೀ ಚನ್ನಕೇಶವ ಸ್ವಾಮಿ ಜಾತ್ರಾ, ಮಹೋತ್ಸವ ಹತ್ತಿರ ಬರುತ್ತಿದ್ದು, ಆಟೋ ಚಾಲಕರ ಸಹಕಾರ ಮುಖ್ಯವಾಗಿದ್ದು, ಪ್ರತಿ ಯೊಬ್ಬರು ಸಹ ದಾಖಲಾತಿ ಇಟ್ಟುಕೊಂಡ ಇರಬೇಕು. ಎಲ್ಲಾ ಆಟೋಗಳ ದಾಖಲಾತಿ ಪರಿಶೀಲಿಸಿ ನಂಬರ್ ವಿತರಿಸಲಾಗಿತ್ತು.ಆದರೆ ಕೆಲವು ಆಟೋಗಳು ಮಾರಾಟವಾಗಿರುವುದರಿಂದ ಮತ್ತೆ ನಂಬರ್ ಚಾಲಕರ ಸಂಘದ ಅಧ್ಯಕ್ಷರು ಮನವಿ ಮಾಡಿದ ಹಿನ್ನಲೆ ಮತ್ತೆ ಅವರಿಗೆ ಕಡ್ಡಾಯವಾಗಿ ನಂಬರ್‌ಗಳನ್ನು ನೀಡಲಾಗುವುದು. ಮಾರ್ಚ್ ಅಂತ್ಯದೊಳಗೆ ಪ್ರತಿಯೊಬ್ಬರು ಎಲ್ಲಾ ದಾಖಲಾತಿ ಇಟ್ಟು ಕೊಂಡಿರಬೇಕು ಇಲ್ಲದಿದ್ದರೆ ಅಂತಹ ಆಟೋಗಳನ್ನು ಜಪ್ತಿ ಮಾಡ ಲಾಗುವು ದೆಂದು ಎಚ್ಚರಿಕೆ ನೀಡಿದರು.

ಆಟೋ ಚಾಲಕರ ಸಂಘದ ಅಧ್ಯಕ್ಷ ದೀಪು, ಆಟೋ ಚಾಲಕರು ಹಾಗು ಪೊಲೀಸ್ ಸಿಬ್ಬಂದಿ ಹಾಜರಿದ್ದರು.

ಕ್ಷಿಪಣೆಗಳ ಅಭಿವೃದ್ಧಿ: ಅಮೇರಿಕ ಆರೋಪ ಅಲ್ಲಗಳೆದ ಇರಾನ್

• ಪ್ರಜೋದಯ ವರದಿ



ಟೆಹ್‌ರಾನ್: ಅಮೇರಿಕವನ್ನು ಸಹ ತಲುಪುವ ಸಾಮರ್ಥ್ಯ ಇರುವ ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆಂಬ ಅಮೇರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಯನ್ನು ಇರಾನ್ ತಳ್ಳಿ ಹಾಕಿದೆ.

ಇದು ದೊಡ್ಡ ಸುಳ್ಳು ಎಂದು ಇರಾನ್‌ನ ವಿದೇಶಾಂಗ ಸಚಿವಾಲಯ ಬುಧವಾರ ತಿಳಿಸಿದೆ. ಇರಾನ್‌ನ ಪರಮಾಣು ಕಾರ್ಯಕ್ರಮ ಮತ್ತು ಖಂಡಾಂತರ ಕ್ಷಿಪಣಿಗಳಿಗೆ ಸಂಬಂಧಿಸಿದಂತೆ ಅಮೇರಿಕ ಆರೋಪಗಳು ದೊಡ್ಡ ಸುಳ್ಳು ಎಂದು ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಕಾಯಿ ಅವರು ಎಕ್ಸ್‌ನಲ್ಲಿ ತಿಳಿಸಿದ್ದಾರೆ. ಟ್ರಂಪ್ ಅವರು ಅಮೇರಿಕ ತಲು ಪಬಲ್ಲ ಕ್ಷಿಪಣಿಗಳನ್ನು ಹೊಂದುವು ದನ್ನು ಇರಾನ್ ಎದುರು ನೋಡುತ್ತಿ ದೆಂದು ಹೇಳಿಕೆ ನೀಡಿದ ಬೆನ್ನಲ್ಲೇ ಅವರು ಎಕ್ಸ್‌ನಲ್ಲಿ ಈ ಪ್ರತಿಕ್ರಿಯೆ ನೀಡಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK